ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

11 ನವೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 241 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸೋತ ಪಂದ್ಯಗಳಲ್ಲಿ ಶ್ಲಾಘನಾರ್ಹ ಪ್ರದರ್ಶನ ನೀಡಿದ್ದರೂ ಅದನ್ನು ಸಂಭ್ರಮಿಸಲೇಬಾರದೆಂದು ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಸೋಮವಾರ ನವದೆಹಲಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.




ನಿಸರ್ಗ ಎಂದಾಕ್ಷಣ ಮನುಷ್ಯ ನೆನಪಾಗುತ್ತಾನಾ ? » 2



ಮಕ್ಕಳ ಯೋಗಕ್ಷೇಮಕ್ಕಾಗಿ ಸಮಗ್ರ ಕ್ರಿಯಾ ಯೋಜನೆ » 3



ಜಿಲ್ಲೆಯ ಸ್ಥಳೀಯ ಸಂಸ್ಥೆಗಳ ಆಡಳಿತಾಧಿಕಾರಿ ಕೈ ವಶ » 4


# ಜೆಡಿಎಸ್ ಕೋರ್ ಕಮಿಟಿಯಿಂದ ಜಿ.ಟಿ.ಡಿ.ಗೆ ಕೋಕ್

## ಅಧ್ಯಕ್ಷರಾಗಿ ಎಂ.ಕೃಷ್ಣಾರೆಡ್ಡಿ, ಸಂಚಾಲಕರಾಗಿ ಎ.ಮಂಜುಗೆ ಮಣೆ | ಪಕ್ಷ ಸಂಘಟನೆಗೆ ಒತ್ತು

• ಪ್ರಜೋದಯ ವರದಿ

**ಬೆಂಗಳೂರು:** ಜೆಡಿಎಸ್ ಪಕ್ಷದಿಂದ ಗೆದ್ದಿದ್ದರೂ ಆರಂಭದಿಂದಲೂ ಪಕ್ಷದ ವಿರುದ್ಧ ಬಹಿರಂಗ ಹೇಳಿಕೆ ನೀಡುತ್ತಾ ಮುನಿಸು ತೋರುತ್ತಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಕೋರ್ ಕಮಿಟಿ ಅಧ್ಯಕ್ಷ ಸ್ಥಾನದಿಂದ ಗೇಟ್ ಪಾಸ್ ನೀಡಲಾಗಿದೆ.

ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಅವರು ಪಕ್ಷದ ಪ್ರಮುಖರ ಸಮಿತಿಯನ್ನು ಪುನಾರಚನೆ ಮಾಡಿದ್ದು, ಜಿ.ಟಿ.ದೇವೇಗೌಡರ ಸ್ಥಾನಕ್ಕೆ ಚಿಂತಾಮಣಿ ಮಾಜಿ ಶಾಸಕ ಎಂ.ಕೃಷ್ಣಾರೆಡ್ಡಿ ಅವರನ್ನು ಸಮಿತಿಯ ನೂತನ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಅರಕಲಗೂಡು ಶಾಸಕ ಎ.ಮಂಜು ಅವರನ್ನು ಕೋರ್ ಕಮಿಟಿ ಸಂಚಾಲಕರನ್ನಾಗಿ ನೇಮಕ ಮಾಡಲಾಗಿದೆ.

**ಕೋರ್ ಕಮಿಟಿ ಸದಸ್ಯರು**

ಮಾಜಿ ಶಾಸಕ ರಾಜವೆಂಕಟಪ್ಪ ನಾಯಕ ದೊರೆ, ಸಂಸದ ಎಂ. ಮಲ್ಲೇಶ್ ಬಾಬು, ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಡಿ.ಸಿ. ತಮ್ಮಣ್ಣ, ಆಲ್ಕೋಡ ಹನುಮಂತಪ್ಪ, ಹೆಚ್.ಕೆ. ಕುಮಾರಸ್ವಾಮಿ, ಸಿ.ಎಸ್. ಪುಟ್ಟರಾಜು, ಮಾಜಿ ಶಾಸಕರಾದ ಹೆಚ್.ಎಸ್.ಶಿವಶಂಕರ್, ಕೆ.ಎಂ. ತಿಮ್ಮರಾಯಪ್ಪ, ಎ.ಮಂಜುನಾಥ್, ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಕೆ.ಜಿ. ಪ್ರಸನ್ನಕುಮಾರ್, ಶಾಸಕರಾದ ಕರೆಮ್ಮ ನಾಯಕ, ನೇಮಿರಾಜ ನಾಯಕ, ಸಮೃದ್ಧಿ ಮಂಜುನಾಥ್, ಶರಣಗೌಡ ಕಂದಕೂರ, ವಿಧಾನ ಪರಿಷತ್ ಸದಸ್ಯ ಇಂಚರ ಗೋವಿಂದರಾಜು, ಹಿರಿಯ ನಾಯಕ ಸಿ.ವಿ.ಚಂದ್ರಶೇಖರ್ ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಪಕ್ಷದ ಶಿಸ್ತುಪಾಲನಾ ಸಮಿತಿ ಅಧ್ಯಕ್ಷರಾಗಿ ಮಾಜಿ ಸಚಿವ ಕುಣಿಗಲ್ ಕ್ಷೇತ್ರದ ಮಾಜಿ ಶಾಸಕ ಡಿ. ನಾಗರಾಜಯ್ಯ ಅವರನ್ನು ಪರಿಗಣಿಸಲಾಗಿದೆ. ಪ್ರಚಾರ ಸಮಿತಿ ಅಧ್ಯಕ್ಷರಾಗಿ ಮಾಜಿ ಶಾಸಕ ವೈ.ಎಸ್.ವಿ.ದತ್ತ ಅವರನ್ನು ನೇಮಕ ಮಾಡಲಾಗಿದೆ. ಕುಮಾರಸ್ವಾಮಿ ಅವರು ರಾಜಕೀಯ ವ್ಯವಹಾರಗಳ ಸಮಿತಿ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ.



**ಜೆಡಿಎಸ್‌ಗೆ 25ರ ಸಂಭ್ರಮ**

ಜೆಡಿಎಸ ಪಕ್ಷಕ್ಕೆ 25 ವರ್ಷ ತುಂಬುತ್ತಿರುವ ಸಂದರ್ಭದಲ್ಲೇ ರಾಜ್ಯಾದ್ಯಂತ ಪಕ್ಷ ಸಂಘಟನೆಗೆ ಒತ್ತು ನೀಡಿರುವ ನಾಯಕರು ಕೋರ್ ಕಮಿಟಿ ಪುನಾರಚನೆ ಮೂಲಕ ಬಲವರ್ಧನೆಗೆ ಒತ್ತು ನೀಡಿದ್ದಾರೆ. ಪದೇ ಪದೇ ಕಾಂಗ್ರೆಸ್ ಜೊತೆ ಕಾಣಿಸಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್‌ನ ಇತರ ನಾಯಕರನ್ನು ಜಿ.ಟಿ.ದೇವೇಗೌಡ ಹಾಡಿ ಹೊಗಳುತ್ತಿರುವುದು ಪಕ್ಷಕ್ಕೆ ಮುಜುಗರವನ್ನುಂಟು ಮಾಡಿದೆ. ಈ ಸಂಬಂಧ ಕುಮಾರಸ್ವಾಮಿ ಮತ್ತು ಜಿ.ಟಿ.ದೇವೇಗೌಡರ ನಡುವೆ ಮುಸುಕಿನ ಗುದ್ದಾಟಕ್ಕೂ ಕಾರಣವಾಗಿತ್ತು.

ಈ ಹಿಂದೆಯೂ ಸಹ ಕುಮಾರಸ್ವಾಮಿ ಹಾಗು ಜಿ.ಟಿ.ದೇವೇಗೌಡರ ನಡುವೆ ಎಲ್ಲವೂ ಸರಿ ಇರಲಿಲ್ಲ. ಆಗ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡ ಮಧ್ಯೆ ಪ್ರವೇಶಿಸಿ ಜಿ.ಟಿ.ದೇವೇಗೌಡರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದರು. ಖುದ್ದು ದೇವೇಗೌಡರೇ ಮನೆಗೆ ತೆರಳಿ ಮಾತುಕತೆ ನಡೆಸಿದ್ದರು. ಆದರೆ ಬಾಂಧವ್ಯ ಬಹಳ ದಿನ ಉಳಿಯಲಿಲ್ಲ. ಕುಮಾರಸ್ವಾಮಿ ಹಾಗು ಜಿ.ಟಿ.ದೇವೇಗೌಡರ ನಡುವಿನ ಬಿರುಕು ಹೆಚ್ಚುತ್ತಲೇ ಇತ್ತು.

**ಸಿಎಂ ಸಭೆಗೆ ಹಾಜರಾದ ಶಾಸಕ**

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ನ.7ರಂದು ಮೈಸೂರಿನಲ್ಲಿ ನಡೆಸಿದ ಜಿಲ್ಲಾ ಅಭಿವೃದ್ಧಿ ಮತ್ತು ಸಮನ್ವಯ ಸಮಿತಿ (ದಿಶಾ) ಸಭೆಗೆ ಗೈರು ಹಾಜರಾಗಿದ್ದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೆಡಿಪಿ ಸಭೆಯಲ್ಲಿ ಹಾಜರಾಗಿ ಗಮನ ಸೆಳೆದಿದ್ದಾರೆ. ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿರುವ ಅವರು, ಕುಮಾರಸ್ವಾಮಿ ಅವರು ನಗರದಲ್ಲಿ ಭಾಗವಹಿಸಿದ್ದ ಯಾವ ಕಾರ್ಯಕ್ರಮದಲ್ಲೂ ಪಾಲ್ಗೊಂಡಿರಲಿಲ್ಲ. ಆ ಮೂಲಕ ತಾವು ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದನ್ನು ಖಚಿತಪಡಿಸಿದ್ದರು.

### ಕ್ಷೇತ್ರದ ಜನರೇ ಹೈಕಮಾಂಡ್

ಜೆಡಿಎಸ್‌ನ ಹಿರಿಯ ನಾಯಕ ಜಿ.ಟಿ.ದೇವೇಗೌಡರು ಜೆಡಿಎಸ್‌ನಲ್ಲಿದ್ದರೂ ಮಾನಸಿಕವಾಗಿ ಪಕ್ಷದಿಂದ ಹೊರಗಿದ್ದರು. ಇತ್ತೀಚೆಗೆ ಹಾಸನಾಂಬ ದರ್ಶನಕ್ಕೆ ಬಂದಿದ್ದ ಅವರು, ವರಿಷ್ಠರ ವಿರುದ್ಧ ಬಹಿರಂಗ ಹೇಳಿಕೆ ನೀಡಿದ್ದರು. ಕ್ಷೇತ್ರದ ಜನರೇ ನನಗೆ ಹೈಕಮಾಂಡ್. ಸದ್ಯ ಜೆಡಿಎಸ್‌ನಲ್ಲಿರುವೆ. ಮುಂಬರುವ ಚುನಾವಣೆ ವೇಳೆಗೆ ಏನಾಗುತ್ತದೆಂಬುದು ಗೊತ್ತಿಲ್ಲ. ಮತದಾರ ಬಾಂಧವರೊಂದಿಗೆ ಚರ್ಚಿಸಿ ಮುಂದಿನ ಹೆಜ್ಜೆ ಇಡುತ್ತೇನೆ. ಅವರು ಚುನಾವಣೆಯಲ್ಲಿ ಸ್ಪರ್ಧಿಸಿ ಎಂದರೆ ಸ್ಪರ್ಧೆ ಮಾಡುತ್ತೇನೆ ಅಥವಾ ವಯಸ್ಸಾಗಿದೆ ಹಿಂದೆ ಸರಿಯಿರಿ ಎಂದರೆ ಮನೆಯಲ್ಲಿರುತ್ತೇನೆಂದು ಮಾರ್ಮಿಕವಾಗಿ ಹೇಳಿದ್ದರು.

# ಸಂಘದ ಶ್ರೇಯೋಭಿವೃದ್ಧಿಗೆ ಶ್ರಮಿಸುವೆ

## ಪತ್ರಕರ್ತರ ಸಂಘದ ನೂತನ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ | ಪ್ರಮಾಣ ಪತ್ರ ಸ್ವೀಕಾರ



• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪತ್ರಕರ್ತರ ಹಿತ ದೃಷ್ಟಿಯಿಂದ ಯಾವ ನಿರ್ಧಾರ ಕೈಗೊಳ್ಳಬೇಕಿದ್ದರೂ ಎಲ್ಲರ ಗಮನಕ್ಕೆ ತರಲಾಗುವುದು. ಸ್ಪಷ್ಟ ಗುರಿ ಯೊಂದಿಗೆ ತಂಡವಾಗಿ ಕೆಲಸ ಮಾಡುತ್ತೇವೆಂದು ಜಿಲ್ಲಾ ಪತ್ರಕರ್ತರ ಸಂಘದ ನೂತನ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಹೇಳಿದರು.

ನಗರದ ಜಿಲ್ಲಾ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸೋಮವಾರ ನಡೆದ ನೂತನ ಪದಾಧಿಕಾರಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಒಂದು ತಂಡ ಗೆಲ್ಲಲು ಎಲ್ಲರೂ ಪ್ರಮುಖ ಪಾತ್ರ ವಹಿಸಿದರು. ಅದಕ್ಕಾಗಿ ಜಿಲ್ಲೆಯ ಎಲ್ಲಾ ಪತ್ರಕರ್ತರಿಗೆ ಅಭಿನಂದನೆ ಹೇಳುತ್ತೇನೆ. ನಾವೆಲ್ಲರೂ ಒಂದು ತಂಡವಾಗಿ ಅಭೂತ ಪೂರ್ವ ಗೆಲುವು ಸಾಧಿಸಲು ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಜಿಲ್ಲಾ ಸಂಘದ ಮಾಜಿ ಅಧ್ಯಕ್ಷರಾದ ರವಿ ನಾಕಲ ಗೂಡು, ಬಿ.ಆರ್.ಉದಯ ಕುಮಾರ್, ಬಾಳ್ಳು ಗೋಪಾಲ್, ಪತ್ರಕರ್ತ ಚೌಡಳ್ಳಿ ಜಗದೀಶ್, ಅತೀಖುರ್ ರೆಹಮಾನ್, ನಟರಾಜ್, ಪ್ರಕಾಶ್ ಸೇರಿ ಅನೇಕರು ಶ್ರಮ ವಹಿಸಿ ಕೆಲಸ ಮಾಡಿದ್ದಾರೆಂದರು.

ಸಂಘದ ಶ್ರೇಯೋಭಿವೃದ್ಧಿಗಾಗಿ ಏನೇ ಕೆಲಸ ಕಾರ್ಯ ಮಾಡಿದರೂ, ಒಂದು ಸ್ಪಷ್ಟ ರೂಪುರೇಷೆ, ಗುರಿಯೊಂದಿಗೆ ನಡೆಯೋಣ. ಸರ್ವರ ಸಲಹೆ, ಸಹಕಾರ ಪಡೆದು ಮುಕ್ತ ನಿರ್ಧಾರ ತೆಗೆದುಕೊಳ್ಳುತ್ತೇವೆ. ಅದರಲ್ಲಿ ಯಾವುದೇ ಅನುಮಾನ ಬೇಡ, ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡೋಣ ಎಂದರು.

ಮಾಜಿ ಅಧ್ಯಕ್ಷ ಬಾಳ್ಳುಗೋಪಾಲ್ ಅವರು ಮಾತನಾಡಿ, ಎಲ್ಲರ ಬೆಂಬಲದಿಂದ ಶಾಂತಿಯುತವಾಗಿ ಚುನಾವಣೆ ನಡೆದಿದೆ. ಚುನಾವಣೆ ಮುಗಿದ ಮೇಲೆ ನಾವೆಲ್ಲರೂ ಒಂದೇ. ನಮ್ಮ ನಮ್ಮ ನಡುವೆ ಯಾವ ಮುನಿಸು ಬೇಡ. ಜಿಲ್ಲೆಯ ಎಲ್ಲಾ ಪತ್ರಕರ್ತರನ್ನು ಒಂದೇ ರೀತಿ ಕಾಣಬೇಕು. ಮುಂದಿನ ದಿನಗಳಲ್ಲಿ ಜಿದ್ದಾಜಿದ್ದಿ ಬದಲು ಅವಿರೋಧ ಆಯ್ಕೆ ಮಾಡುವ ವಾತಾವರಣ ನಿರ್ಮಾಣ ಮಾಡಲು ಸ್ಪಂದಿಸಿ ಎಂದು ಸಲಹೆ ನೀಡಿದರು.

ಮಾಜಿ ಅಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಹಿಂದಿನ ಎಲ್ಲಾ ಅಧ್ಯಕ್ಷರು ಸಂಘಕ್ಕೆ ತಮ್ಮ ಕೈಲಾದ ಸಹಾಯ ಮಾಡಿದ್ದಾರೆ. ಅವರು ಹಾಕಿರುವ ಭದ್ರ ಬುನಾದಿಯಿಂದ ಇಂದು ಸಂಘಟನಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ಕೆಂಚೇಗೌಡ ಅವರ ಅವಧಿಯಲ್ಲೂ ಉತ್ತಮ ಕೆಲಸ ಆಗಲಿ, ಮುಂದೆಯೂ ಅದೇ ಪರಂಪರೆ ಮುಂದುವರಿಯಲಿ ಎಂದು ಆಶಿಸಿದರು.

ಇಂದಿನ ಗೆಲುವು ಸಂಘಟನೆಯಲ್ಲಿ ಬಲವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಮುಂದಿನ ದಿನಗಳಲ್ಲಿ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ನೆರವಾಗಲು ಕ್ಷೇಮ ನಿಧಿಯನ್ನು 1 ಕೋ.ರೂ.ಗೆ ಏರಿಸಬೇಕೆಂದು ಮನವಿ ಮಾಡಿದರು.

ನೂತನ ಉಪಾಧ್ಯಕ್ಷ ಎನ್. ನಂಜುಂಡೇಗೌಡ ಅವರು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ಚರ್ಚಿಸಿ, ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚರ್ಚಿಸಿ ಹೆಜ್ಜೆ ಇಡೋಣ ಎಂದರು. ಅದಕ್ಕೂ ಮುನ್ನ ಬಿ.ಆರ್. ಉದಯಕುಮಾರ್, ಜಗದೀಶ್ ಚೌಡವಳ್ಳಿ, ಅತೀಖುರ್ ರೆಹಮಾನ್, ಮಂಜು ಬನವಾಸೆ, ಸುರೇಶ್ ಕುಮಾರ್ ಮಾತನಾಡಿದರು. ನೂತನ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ ಸ್ವಾಗತಿಸಿದರು. ಕೆ.ಎಂ.ಹರೀಶ್ ವಂದಿಸಿದರು. ಚುನಾವಣಾಧಿಕಾರಿ ಡಿ.ಜೆ.ರಾಜೇಶ್ ಮತ್ತು ಸಹಾಯಕ ಚುನಾವಣಾಧಿಕಾರಿ ಕೆ.ಎಂ. ಮೋಹನ್ ಕುಮಾರ್ ಪ್ರಮಾಣ ಪತ್ರ ವಿತರಣೆ ಮಾಡಿದರು.

### ಕಾರ್ಯಕಾರಿ ಸಮಿತಿಗೆ ಆಯ್ಕೆ

ಭಾನುವಾರ ನಡೆದ ಚುನಾವಣೆಯಲ್ಲಿ ಜೆ.ಆರ್.ಕೆಂಚೇಗೌಡ ಬಣದ ಪದಾಧಿಕಾರಿಗಳು ಅಭೂತಪೂರ್ವ ಗೆಲುವು ಸಾಧಿಸಿದ್ದಾರೆ. 15 ಕಾರ್ಯಕಾರಿ ಸಮಿತಿ ಸದಸ್ಯರಾಗಿ 14 ಜನರು ಈ ಬಣದವರೇ ಗೆದ್ದಿರುವುದು ವಿಶೇಷ. ಶರಣ್ 227 ಮತ ಪಡೆದರೆ, ಸಿ.ಆರ್.ನವೀನ್ 218, ಎಂ.ಜಿ.ಸ್ವರೂಪ್ 212, ಪ್ರಸನ್ನಕುಮಾರ್ (ಚಲಂ) 205, ಜಗದೀಶ್ ಚೌಡಳ್ಳಿ 200, ಕೃಷ್ಣ ಇಬ್ಬೀಡು 198, ಹೆಚ್.ಎ.ನಾಗರಾಜ 198, ಸುವರ್ಣ ಶರತ್ 195, ಮಲ್ಲೇಶ 193, ರಾಘವೇಂದ್ರ ಆಲೂರು 187, ವಿರೂಪಾಕ್ಷ 181, ಹಿರೀಸಾವೆ ಪ್ರತಾಪ್ 179, ವಿಶ್ವನಾಥ್ 169, ಹೆಚ್.ವಿ.ಸುರೇಶ್‌ಕುಮಾರ್ 155 ಹಾಗು ವಿರೋಧಿ ಬಣದ ಎಂ.ಎಸ್.ಸ್ವಾಗತ್ 129 ಮತ ಪಡೆದು ಗೆಲುವಿನ ನಗೆ ಬೀರಿದ್ದಾರೆ.

# ಸುಳ್ಳು ಹೇಳಿಕೆಗಳಿಂದ ಜನರ ದಾರಿ ತಪ್ಪಿಸುವ ಕೆಲಸ

## ಮಾಜಿ ಸಚಿವ ಬಿ. ಶಿವರಾಮ್ ವಿರುದ್ಧ ಶಾಸಕ ಸುರೇಶ್ ವಾಗ್ದಾಳಿ | ಕಾಂಗ್ರೆಸ್ ಸದಸ್ಯರ ಎದಿರೇಟು

• ಪ್ರಜೋದಯ ವರದಿ

**ಬೇಲೂರು:** ಕ್ಷೇತ್ರದ ರೈತರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಚಿವರು ಅಧಿಕಾರಿಗಳನ್ನು ಗೋಗರೆದು ಅನುದಾನ ತಂದರೆ ಇಲ್ಲೊಬ್ಬರು ಸುಳ್ಳು ಹೇಳುತ್ತಾ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಮಾಜಿ ಸಚಿವ ಬಿ.ಶಿವರಾಮ್ ವಿರುದ್ಧ ವಾಗ್ದಾಳಿ ನಡೆಸಿದರು.

ಪಟ್ಟಣದ ತಾಲ್ಲೂಕು ಪಂಚಾ ಯಿತಿಯಲ್ಲಿ ಸೋಮವಾರ ನಡೆದ ಕೆಡಿಪಿ ಸಭೆಯಲ್ಲಿ ಶಾಸಕರು ಈ ವಿಷಯ ಪ್ರಸ್ತಾಪಿಸಿದಾಗ ವಿರೋಧ ವ್ಯಕ್ತಪಡಿಸಿದ ನಾಮನಿರ್ದೇಶಿತ ಸದಸ್ಯರು ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದರು. ಮಾತಿನ ಚಕಮಕಿಯಿಂದ ಸಭೆ ಗೊಂದಲದ ಗೂಡಾಗಿ ಮಾರ್ಪಟ್ಟಿತು.




ತಾಲ್ಲೂಕಿನ ಹನಿಕೆ, ಕೋಳಗುಂದ, ಬಿಕ್ಕೋಡು, ತಟ್ಟೆಹಳ್ಳಿ ಸೇರಿ ವಿವಿಧ ಭಾಗಗಳಿಗೆ 220 ಕೆವಿ ಸಾಮರ್ಥ್ಯದ ಸಬ್ ಸ್ಟೇಷನ್‌ಗಳನ್ನು ಮುಖ್ಯಮಂತ್ರಿ, ಇಂಧನ ಸಚಿವರ ಬಳಿ ಪದೇ ಪದೇ ಅಲೆದು ಮಂಜೂರು ಮಾಡಿಸಿದ್ದೇನೆ. ಅದರಿಂದ ಗ್ರಾಮದ ರೈತರು ಹಾಗು ವಿದ್ಯಾರ್ಥಿಗಳಿಗೆ ಭಾರೀ ಅನುಕೂಲವಾಗಿದೆ. ಸದನದಲ್ಲೂ ಸಾಕಷ್ಟು ಸಲ ಈ ವಿಚಾರ ಪ್ರಸ್ತಾಪಿಸಿದ್ದೇನೆ. ಕ್ಷೇತ್ರದ ಜನರ ಒಳಿತಿಗಾಗಿ ನಾನು ಕೆಲಸ ಮಾಡುತ್ತಿದ್ದರೆ ಇಲ್ಲೊಬ್ಬರು ಸಾರ್ವಜನಿಕರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಅನುದಾನ ತಂದಿರುವರು ಯಾರು, ಅಧಿಕಾರಿ

» ನಾಲ್ಕನೇ ಪುಟದಲ್ಲಿ


# ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ನ.11 ಮಧ್ಯಾಹ್ನ ಚನ್ನರಾಯಪಟ್ಟಣದಲ್ಲಿ 1.30 ರಿಂದ ಸಂಜೆ 5 ಗಂಟೆಯವರೆಗೆ ತಾಲ್ಲೂಕು ಕಚೇರಿ ಆವರಣದಲ್ಲಿ ಸಾರ್ವಜನಿಕರ ಭೇಟಿ ಮತ್ತು ಕುಂದು ಕೊರತೆ ಅಹವಾಲುಗಳನ್ನು ಸ್ವೀಕರಿಸಲಿದ್ದಾರೆ. ನಂತರ ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿಗಳನ್ನು ದಾಖಲಿಸಿ ಟೋಕನ್ ನಂಬರ್‌ಗಳನ್ನು ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಬಹುದಾಗಿದೆ




# ನಿಸರ್ಗ ಎಂದಾಕ್ಷಣ ಮನುಷ್ಯ ನೆನಪಾಗುತ್ತಾನಾ?





■ ಪ್ರಕೃತಿಯೊಂದಿಗೆ ಕ್ಷಿಪ್ತವಾದ ಪ್ರತಿಯೊಂದು ವಸ್ತುವೂ, ಕಾರ್ಯವೂ ಪರಮಪವಿತ್ರ. ಆದರೆ ಆ ಪಾವಿತ್ರ್ಯದ ಕೀಲು ಕಳಚುತ್ತಿರುವುದು ಮನುಷ್ಯ. ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿತ್ಯವೂ ಅತ್ಯಾಚಾರಗೈಯುತ್ತಿರುವ ಮನುಷ್ಯ, ಬದುಕಲು ಅತ್ಯವಶ್ಯವಾದ ಪ್ರಾಣವಾಯುವನ್ನು ನೀಡುವ ಮರವನ್ನು ಕಡಿಯುವುದರಲ್ಲೂ ದಾಕ್ಷಿಣ್ಯ ತೋರುತ್ತಿಲ್ಲ.

ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿತ್ಯವೂ ಅತ್ಯಾಚಾರಗೈಯುತ್ತಿರುವ ಮನುಷ್ಯ, ಬದುಕಲು ಅತ್ಯವಶ್ಯವಾದ ಪ್ರಾಣವಾಯುವನ್ನು ನೀಡುವ ಮರವನ್ನು ಕಡಿಯುವುದರಲ್ಲೂ ದಾಕ್ಷಿಣ್ಯ ತೋರುತ್ತಿಲ್ಲ. ಮರವನ್ನು ಕಡಿಯುವುದೂ ಒಂದೇ, ತನ್ನ ಶ್ವಾಸಕೋಶವನ್ನು ಕತ್ತರಿಸಿಕೊಳ್ಳುವುದೂ ಒಂದೇ ಎಂಬ ಜ್ಞಾನವೂ ಈತನಿಗಿಲ್ಲ. ದೈವದತ್ತವಾಗಿ ಬಂದದ್ದನ್ನು ಉಳಿಸಿಕೊಳ್ಳಲು ಆಗದಿದ್ದಾಗ ಪರ್ಯಾಯ ವ್ಯವಸ್ಥೆಯೊಂದೇ ದಾರಿ.

ನಿಸರ್ಗವೆಂದರೆ ನಮಗೆ ನೆನಪಾಗುವುದು ಗಿಡ-ಮರಗಳು, ಹುಲ್ಲುಗಾವಲು, ಹೂವು-ಹಣ್ಣು, ನದಿ-ಸರೋವರಗಳು, ಗಿರಿಶಿಖರಗಳು. ಈ ಪಟ್ಟಿಯಿಂದ ಹೊರಗೆ ಉಳಿಯುವುದು ಮನುಷ್ಯ ಮಾತ್ರ. ನಿಸರ್ಗ ಎಂದಾಕ್ಷಣ ಎಂದಾದರೂ ಮನುಷ್ಯ ನೆನಪಾಗುತ್ತಾನಾ? ಖಂಡಿತ ಇಲ್ಲ. ಒಂದೊಮ್ಮೆ ನೆನಪಾದರೂ ಖಳನಾಯಕನಾಗಿಯೇ ಹೊರತು ನಾಯಕನಾಗಿ ಅಲ್ಲ, ಸೇವಕನಾಗಿಯೂ ಅಲ್ಲ. ನಿಜ, ಪ್ರಕೃತಿಯಲ್ಲಿ ಸೇವಕನಿಗೂ ರಾಜಮರ್ಯಾದೆ, ಅಲ್ಲಿ ಕನಿಷ್ಠ ಎಂಬುದಿಲ್ಲ.

ಪ್ರಕೃತಿಯೊಂದಿಗೆ ಕ್ಷಿಪ್ತವಾದ ಪ್ರತಿಯೊಂದು ವಸ್ತುವೂ, ಕಾರ್ಯವೂ ಪರಮಪವಿತ್ರ. ಆದರೆ ಆ ಪಾವಿತ್ರ್ಯದ ಕೀಲು ಕಳಚುತ್ತಿರುವುದು ಮನುಷ್ಯ. ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯ ಮೇಲೆ ನಿತ್ಯವೂ ಅತ್ಯಾಚಾರಗೈಯುತ್ತಿರುವ ಮನುಷ್ಯ, ಬದುಕಲು ಅತ್ಯವಶ್ಯವಾದ ಪ್ರಾಣವಾಯುವನ್ನು ನೀಡುವ ಮರವನ್ನು ಕಡಿಯುವುದರಲ್ಲೂ ದಾಕ್ಷಿಣ್ಯ ತೋರುತ್ತಿಲ್ಲ.

ಮರವನ್ನು ಕಡಿಯುವುದೂ ಒಂದೇ, ತನ್ನ ಶ್ವಾಸಕೋಶವನ್ನು ಕತ್ತರಿಸಿಕೊಳ್ಳುವುದೂ ಒಂದೇ ಎಂಬ ಜ್ಞಾನವೂ ಈತನಿಗಿಲ್ಲ. ದೈವದತ್ತವಾಗಿ ಬಂದದ್ದನ್ನು ಉಳಿಸಿಕೊಳ್ಳಲು ಆಗದಿದ್ದಾಗ ಪರ್ಯಾಯ ವ್ಯವಸ್ಥೆಯೊಂದೇ ದಾರಿ. ಅಂಥ ದಾರಿಗಳಲ್ಲೊಂದು ಕೃತಕ ಉದ್ಯಾನ ಅಥವಾ ಪಾರ್ಕ್.

ಸೌದಿ ಅರೇಬಿಯಾದ ನನ್ನ ಮನೆಯ ಹಿಂಭಾಗದಲ್ಲೊಂದು ಸುಂದರ ಉದ್ಯಾನವಿದೆ. ರಣ ಮರುಭೂಮಿಯ ದೇಶದ ಪ್ರಮುಖ ನಗರಗಳಲ್ಲೊಂದಾದ ದಮಾಮ್‌ನ ಮಧ್ಯಭಾಗದಲ್ಲಿರುವ ಇದು, ಉಳಿದ ಉದ್ಯಾನಗಳಿಗಿಂತ ಒಂದು ಸ್ತರ ಮೇಲೆ. ಉದ್ಯಾನದೊಳಗೆ ಕಬ್ಬಿಣದ ಬೇಲಿಗೆ ತಾಗಿಕೊಂಡಂತೆ, ಒಂದಕ್ಕೊಂದು ಹೊಂದಿಕೊಂಡ ಇಟ್ಟಿಗೆಗಳಿಂದ ನಿರ್ಮಿಸಿದ ನಡಿಗೆಯ ಮಾರ್ಗವಿದೆ.

ಇಲ್ಲಿ ಒಂದು ಸುತ್ತು ಹಾಕಿದರೆ, ಬರೋಬ್ಬರಿ ಎರಡೂವರೆ ಕಿ.ಮೀ. ಆಗುತ್ತದೆ. ಉದ್ಯಾನದೊಳಗೆ ಕಾರ್ ಪಾರ್ಕಿಂಗ್, ಮಕ್ಕಳಿಗೆ ಆಡಲು ಉಯ್ಯಾಲೆ-ಜಾರುಬಂಡಿಯಂಥ ಸೌಲಭ್ಯಗಳಿವೆ. ಜಾರುಬಂಡಿ ಇರುವೆಡೆ ಸ್ವಲ್ಪ ಮರಳು, ಡಾಂಬರ್ ಹಾಕಿದ ಕಾರ್ ಪಾರ್ಕಿಂಗ್ ಮತ್ತು ಒಳಗಿನ ರಸ್ತೆಯ ಭಾಗ ಬಿಟ್ಟರೆ, ಉಳಿದೆಲ್ಲೆಡೆ ಹಸಿರುಮಯ.

ಇಲ್ಲಿ ಖರ್ಜೂರ, ತಾಳೆ ಸೇರಿದಂತೆ 500 ಮರಗಳಿವೆ. ಎಲ್ಲವೂ 25-30 ಅಡಿಗಿಂತಲೂ ಎತ್ತರ ಬೆಳೆದುನಿಂತು ಭೂಮಿಗೆ ತಂಪೆರೆಯುತ್ತಿವೆ. ನಡುನಡುವೆ ಅಲಂಕಾರಿಕ ಗಿಡಗಳು, ಒಂದು ಮಲ್ಲಿಗೆ ಬಳ್ಳಿ ಇತ್ಯಾದಿಗಳಿವೆ. ಇಷ್ಟೆಲ್ಲ ಇರುವ ಉದ್ಯಾನಕ್ಕೊಂದು ಹೆಸರಿಲ್ಲ.

ಒಂದಿಷ್ಟು ಕೆಲಸಗಾರರು ಮುಂಜಾನೆ 5ಕ್ಕೆ ಬಂದು ಉದ್ಯಾನವನ್ನು ಗುಡಿಸಿ, ಹುಲ್ಲುಹಾಸು ಮತ್ತು ಗಿಡಗಳಿಗೆ ನೀರು ಹಾಯಿಸಿ ನಿರ್ಗಮಿಸುತ್ತಾರೆ. ಸಾಕಷ್ಟು ವರ್ಷಗಳಿಂದ ಈ ಉದ್ಯಾನವನ್ನು ಹೊರಗಿನಿಂದಲೇ ನೋಡುತ್ತಿದ್ದೆ, ಒಮ್ಮೆಯೂ ಒಳಗೆ ಕಾಲಿಟ್ಟಿರಲಿಲ್ಲ. ಕೆಲ ತಿಂಗಳ ಹಿಂದೆ ಒಮ್ಮೆ ಉದ್ಯಾನದ ಒಳಗೆ ಹೋಗಿ ನೋಡೋಣವೆಂದು ಹೋದೆ.


ಅಷ್ಟೇ, ಲವ್ ಅಟ್ ಫಸ್ಟ್ ಸೈಟ್ ಅಂತಾರಲ್ಲಾ, ಹಾಗಾಯಿತು! ಈ ಮೊದಲು ನಾನೆಂದೂ ಸತತ 3 ದಿನಕ್ಕಿಂತ ಹೆಚ್ಚು ವಾಕ್ ಮಾಡಿದ ದಾಖಲೆಯಿಲ್ಲ; ಈ ಉದ್ಯಾನ ಅದೆಷ್ಟು ಆಪ್ತವಾಯಿತೆಂದರೆ, ಪ್ರತಿನಿತ್ಯ ಬೆಳಗ್ಗೆ 2 ಸುತ್ತು ನಡಿಗೆ. ಆ ಸೆಳೆತವೇ ನನ್ನನ್ನು ಮುಂಜಾನೆ ಬೇಗ ಎಬ್ಬಿಸಿಬಿಡುತ್ತಿತ್ತು.

ಒಮ್ಮೆ ಅದ್ಯಾಕೋ ಬೆಳಗ್ಗೆ ವಾಕಿಂಗ್ ಹೋಗಲು ಆಗಿರಲಿಲ್ಲ, ರಾತ್ರಿಯ ವಾತಾವರಣ ಹೇಗಿರುತ್ತದೆಂದು ನೋಡಲು ಹೋದೆ. ಅಂದು ಅಚ್ಚರಿಯೆಂಬಂತೆ ಒಂದು ಬಿಳಿ ಬಣ್ಣದ ಮೊಲ ಎದುರಾಯಿತು. ಸರಿಯಾಗೇ ಓದಿದ್ದೀರಿ- ಮೊಲ ಎದುರಾಯಿತು.

ಮರುಭೂಮಿಯ ಮಧ್ಯೆ ಉದ್ಯಾನವನ್ನು ಮಾಡುವುದೇ ಹರಸಾಹಸ, ಅದರಲ್ಲಿ ಮೊಲವೂ ಇದೆ ಎಂದರೆ ನಂಬಲಾಗಲಿಲ್ಲ. ಯಾರಾದರೂ ತಂದುಬಿಟ್ಟಿರಬಹುದಾ? ಅಷ್ಟು ಚೆಂದದ ಮೊಲವನ್ನು ನೋಡಿದರೆ, ವೈರಾಗ್ಯ ಬರಲು ಸಾಧ್ಯವೇ ಇಲ್ಲ. ಒಂದೊಮ್ಮೆ ಮೊಲ ಸಾಕಣೆ ಸಾಕೆನಿಸಿದರೂ, ಬಹುತೇಕವಾಗಿ ಅದರ ಅಂತ್ಯ ಊಟದ ತಟ್ಟೆಯಲ್ಲೇ ಹೊರತು ಉದ್ಯಾನದಲ್ಲಲ್ಲ.

ಅದೂ ಅಲ್ಲದೆ, ಬೇಡ ಎಂದರೆ ಹಣಕ್ಕೆ ಖರೀದಿಸುವ ಪೆಟ್ ಶಾಪ್‌ಗಳೂ ಇಲ್ಲಿವೆ. ಅಂದರೆ ಅದು ಯಾರೂ ಬಿಟ್ಟು ಹೋಗಿರಲು ಸಾಧ್ಯವಿಲ್ಲ. ಮಿಕ್ಕ ಸಾಧ್ಯತೆಯೆಂದರೆ, ಅಕ್ಕಪಕ್ಕದಲ್ಲಿನ ಸಾಕಿದವರ ಮನೆಯಿಂದ ತಪ್ಪಿಸಿಕೊಂಡು ಬಂದಿರಬಹುದು. ಆ ಸಾಧ್ಯತೆಯೇ ಹೆಚ್ಚು. ಆದರೆ ತಪ್ಪಿಸಿಕೊಂಡ ಮೊಲಕ್ಕೆ ಹತ್ತಿರದಲ್ಲೇ ತಾನು ಬದುಕಬಲ್ಲ ಸ್ಥಳವೊಂದಿದೆ ಎಂದು ತಿಳಿದ್ದಾದರೂ ಹೇಗೆ? ಅದಕ್ಕೆ ಮಾರ್ಗದರ್ಶನ ಮಾಡಿದ್ದು ಯಾರು? ಬಹುಶಃ ಅದೇ ಪ್ರಕೃತಿ ನಿಯಮ. ಏನೇ ಇರಲಿ, ಕಂಡ ಕ್ಷಣದಿಂದಲೇ ಅದು ಹೃದ್ಯವಾಯಿತು.

ಮರುದಿನ ವಾಕಿಂಗ್‌ಗೆ ಹೋಗುವಾಗ ಒಂದು ಗಜ್ಜರಿ ಒಯ್ದೆ. ತಿನ್ನದೆ ಎಷ್ಟು ದಿನವಾಗಿತ್ತೋ? ನಿಮಿಷಾರ್ಧದಲ್ಲಿ ತಿಂದು ಮುಗಿಸಿತು. ಅಂದಿನಿಂದ ಪ್ರತಿ ರಾತ್ರಿ ಕ್ಯಾರೆಟ್ ವಾಕ್ ಮುಂದುವರಿಯಿತು. 2 ವಾರದ ನಂತರ ಒಮ್ಮೆ ಬಿಳಿಯ ಮೊಲದೊಂದಿಗೆ ಬೂದು ಬಣ್ಣದ ಮೊಲ, ನಂತರ ಇನ್ನೊಂದು ಹೀಗೆ 3 ಮೊಲಗಳು ಕಾಣಿಸಿಕೊಂಡವು.



ಆ ಮೂರರ ವಾಸ್ತವ್ಯವೂ ಒಂದೇ ಪೊದೆಯಲ್ಲಿ. ಅಲ್ಲಿಗೆ ರಾತ್ರಿ ವಾಕ್ ನ ಬಜೆಟ್ 3 ಗಜ್ಜರಿಗೆ ಏರಿತು. ದಿನಗಳೆದಂತೆ, ವಾಕ್ ಮಾಡಲು ಮನಸ್ಸಿಲ್ಲದಿದ್ದರೂ ಮೊಲಕ್ಕೆ ಗಜ್ಜರಿ ಕೊಡಲಾದರೂ ಹೋಗಬೇಕು ಎನ್ನುವಷ್ಟು ಬಾಂಧವ್ಯ ಬೆಳೆಯಿತು. ಹೀಗಿರುವಾಗ ಒಂದು ದಿನ 5-6 ಪುಂಡು ಹುಡುಗರು ಅದನ್ನು ಹಿಡಿಯಲು ಯತ್ನಿಸುತ್ತಿದ್ದರು.

ಅವರನ್ನೇನೋ ಗದರಿಸಿ ಕಳಿಸಿದರೆ, ಮರುದಿನ ಯುವಕರ ತಂಡವೊಂದು ಸಿದ್ಧವಾಗಿ ಬಂದಿತ್ತು. ಅವರಲ್ಲಿ ವಾದಕ್ಕೇ ನಿಲ್ಲಬೇಕಾಯಿತು. ಈ ಬೇಸಗೆಯ ತಾಪದಿಂದ ಮೊಲವನ್ನು ಬಚಾವು ಮಾಡಲು ಬಂದಿದ್ದೇವೆ ಎಂದು ವಾದಿಸುತ್ತಿದ್ದ ಯುವಕರ ಕೈಯಲ್ಲಿ ದೊಡ್ಡ ಬಡಿಗೆಗಳಿದ್ದವು.

ಸ್ಥಳೀಯ ಯುವಕರೊಂದಿಗೆ ತಲೆ ಚಚ್ಚಿಕೊಳ್ಳುವುದು ಬೇಡ ಎಂದುಕೊಂಡು, ಭಾರವಾದ ಮನಸ್ಸಿನಿಂದಲೇ ಅಲ್ಲಿಂದ ಹೊರಟೆ. ಆದರೆ, ಮೂರೂ ಮೊಲಗಳ ಆಯುಷ್ಯ ಗಟ್ಟಿಯಾಗಿದೆ ಎಂದು ಮರುದಿನ ಸಾಬೀತಾಗಿತ್ತು. ಅಂದಿನಿಂದ ಇಂದಿನವರೆಗೂ ಕ್ಯಾರೆಟ್ ವಾಕಿಂಗ್ ನಿರಂತರವಾಗಿದೆ. ಮನುಷ್ಯ ಕೊಲ್ಲುವ ವಿದ್ಯೆ ಕಲಿತರೆ, ಪ್ರಾಣಿಗಳು ಬದುಕುವ ವಿದ್ಯೆಯನ್ನೂ ಕಲಿತಿವೆ!

ಆ ವಿದ್ಯೆ ಅವನ್ನು ಇನ್ನೆಷ್ಟು ದಿನ ಬದುಕಿಸಬಲ್ಲದೋ ಗೊತ್ತಿಲ್ಲ! ವಿಭಿನ್ನ ವ್ಯಕ್ತಿತ್ವಗಳು ನಮಗೆ ಕಾಣಸಿಗುವ ಸ್ಥಳಗಳಲ್ಲಿ ಉದ್ಯಾನವೂ ಒಂದು. ಆರೋಗ್ಯ ಸುಧಾರಿಸಿಕೊಳ್ಳಲು ಬರುವವರು, ಇದ್ದ ಆರೋಗ್ಯ ನಿಭಾಯಿಸಿಕೊಳ್ಳಲು ಬರುವವರು, ಬೇರೆಯವರ ಆರೋಗ್ಯ ಹಾಳುಗೆಡವಲು ಬರುವವರು, ಎಲ್ಲರನ್ನೂ ಒಟ್ಟಿಗೇ ನೋಡಬಹುದಾದ ಸ್ಥಳ ಅದು.

ಒಂದಿಷ್ಟು ಜನ ಓಡುತ್ತಿರುತ್ತಾರೆ, ಒಂದಿಷ್ಟು ಜನ ಆಡುತ್ತಿರುತ್ತಾರೆ, ಒಂದಿಷ್ಟು ಮಂದಿ ಆಟ-ವಿಹಾರದ ನೆಪದಲ್ಲಿ ಅರಿವಿದ್ದೋ ಇಲ್ಲದೆಯೋ ವಾತಾವರಣ ಹಾಳುಗೆಡಹುವಲ್ಲಿ ನಿರತರಾಗಿರುತ್ತಾರೆ. ಈ ಉದ್ಯಾನದಲ್ಲಿ ಸಂಜೆ ಫ್ರಿಸ್ಬೀ, ಕ್ರಿಕೆಟ್, ಫುಟ್‌ಬಾಲ್ ಆಡಲು, ಮನೆಯವರೊಂದಿಗೆ, ಮಕ್ಕಳೊಂದಿಗೆ ವಿಹಾರಕ್ಕೆ ಬರುವವರಿದ್ದಾರೆ.

ಯಾವ ತಕರಾರಿಲ್ಲ, ಉದ್ಯಾನವಿರುವುದೇ ಅದಕ್ಕೆ. ಆದರೆ ಯಾವುದೇ ಸ್ಥಳಕ್ಕೆ ಹೋದರೂ ಅಲ್ಲಿನ ಒಂದು ಶಿಷ್ಟಾಚಾರ ಇರುತ್ತದೆ. ಆಯಾ ಸ್ಥಳಕ್ಕೆ ಕೊಡಬೇಕಾದ ಮರ್ಯಾದೆಯನ್ನು ನಾವು ಕೊಡಲೇಬೇಕು. ಕೆಲವರು ಉದ್ಯಾನಕ್ಕೆ ಬಂದು ಊಟ-ಉಪಾಹಾರ ಸೇವಿಸುವುದು ಸಾಮಾನ್ಯ. ಒಂದು ವರ್ಗದವರು ತಾವು ಬೀರಿದ ಎಲ್ಲ ಕಸವನ್ನೂ ಎತ್ತಿ ಕಸದಬುಟ್ಟಿಗೆ ಹಾಕಿ ಹೋಗುತ್ತಾರೆ, ಒಳ್ಳೆಯದು. ಇನ್ನೊಂದು ವರ್ಗದವರಿದ್ದಾರೆ, ಉದ್ಯಾನಕ್ಕೆ ಬಂದಾಗ ಇದ್ದಕ್ಕಿದ್ದಂತೆ ಅವರೊಳಗೆ ಹುದುಗಿದ್ದ ಪರೋಪಕಾರಾರ್ಥಂ ಇದಂ ಶರೀರಂ ಮಂತ್ರ ಜಾಗೃತಗೊಳ್ಳುತ್ತದೆ.

ಅವರ ಔದಾರ್ಯ ತುಳುಕುವುದು ಇಲ್ಲಿ ಮಾತ್ರ. ತಾವು ತಿಂದು ಬಿಟ್ಟ, ಕೆಳಗೆ ಬೀರಿದ ಆಹಾರವನ್ನು ಹಕ್ಕಿಗಳು ತಿಂದು ಬದುಕಲಿ ಎಂಬ ಉದಾರ ಮನಸ್ಸು ಅವರದ್ದು. ಇಂಥವರು ಬಿಟ್ಟು ಹೋಗದಿದ್ದರೆ ಬಹುಶಃ ಹಕ್ಕಿಗಳು ಬದುಕುತ್ತಲೇ ಇರಲಿಲ್ಲವೇನೋ? ಅದಿರಲಿ, ಹಕ್ಕಿಗಳು ಪ್ಲಾಸ್ಟಿಕ್, ಚೂಯಿಂಗ್ ಗಮ, ಕೋಳಿಯ ಕಾಲು, ಮೀನಿನ ಮೂಳೆಯನ್ನೂ ತಿನ್ನುತ್ತವಾ? ಅವರು ಕಲಿತದ್ದು ಹೆಚ್ಚಾಯಿತಾ ಅಥವಾ ನಾವು ಕಲಿತದ್ದೇ ಕಡಿಮೆ ಆಯಿತಾ!

ಒಮ್ಮೆ ಈ ಉದ್ಯಾನದ ಹುಲ್ಲುಹಾಸಿನ ಮೇಲೆ ಇಬ್ಬರು (ಭಾರತೀಯರೇ) ಸುಮ್ಮನೆ ವಾಲಿಬಾಲ್ ಆಡುತ್ತಿದ್ದುದನ್ನು ನೋಡಿದೆ. ಮಾರನೇ ದಿನ ನೆಟ್ ತಂದು ಎರಡು ಕರೆಂಟ್ ಕಂಬಕ್ಕೆ ಬಿಗಿದು, ಕೋರ್ಟ್ ಅಳತೆಯಂತೆ ಗಡಿ ಗುರುತಿಸಲು ಹಗ್ಗ ಇಟ್ಟರು.

ಸರಿಹೋಗಲಿಲ್ಲವೇನೋ, ಮಾರನೇ ದಿನ ಹಗ್ಗದ ಬದಲು ಸುಣ್ಣದಲ್ಲಿ ಮಾರ್ಕ್ ಮಾಡಿದರು. ಅದೂ ಸರಿಯಾಗದಿದ್ದಾಗ ಗುದ್ದಲಿ, ಪಿಕಾಸಿ ತಂದು ಹುಲ್ಲನ್ನು ಕೆತ್ತಿ, ಎರಡು ಕಂಬ ಹುಗಿದು ನೆಟ್ ಕಟ್ಟಿ ಆಡತೊಡಗಿದರು. ಅವರ ತಯಾರಿ ನೋಡಿ ಬಹುಶಃ ದೊಡ್ಡ ತಂಡವೇ ಬರಬಹುದು ಅಂದುಕೊಂಡೆ. ಊಹೆ ಸರಿಯಾಗಿತ್ತು, ಈಗ ತಂಡ ಬೆಳೆದಿದೆ.

ಅವರೊಂದಿಗೆ ಇಬ್ಬರು ಮಕ್ಕಳು ಸೇರಿಕೊಂಡಿದ್ದಾರೆ. ಈಗ ಒಂದೊಂದು ತಂಡದಲ್ಲಿ ಬರೋಬ್ಬರಿ ಇಬ್ಬರಿದ್ದಾರೆ, ಒಮ್ಮೆಯೂ ಬಾಲ್ ಹಿಂತಿರುಗಿ ಸರ್ವಿಸ್ ಮಾಡಿದ ಕೋರ್ಟಿಗೆ ಹೋದದ್ದು ಕಂಡಿಲ್ಲ. ಹೊಂಡ ಹೊಡೆದದ್ದೇ ಸಾಧನೆ!

ಕೆಲವರಿಗೆ ಪಾರ್ಕ್ ಎಂದರೆ ಜೋಕ್! ಕೊನೆಯದಾಗಿ ಒಬ್ಬ ಬಾಬಾನ ಕತೆ ಹೇಳುತ್ತೇನೆ. ಬಾಬಾ ಎಂದರೆ ಸನ್ಯಾಸಿಯಲ್ಲ. ಅದು ಇಲ್ಲಿ ಹಿರಿಯರನ್ನು ಗೌರವದಿಂದ ಕರೆಯಲು ಬಳಸುವ ಪದ. ಮುಂಜಾನೆಯ ಸೂರ್ಯಕಿರಣ ಸೇವಿಸಲು ಕಾರಿನಲ್ಲಿ ಬರುವ ಸುಮಾರು 80 ವರ್ಷದ ಬಾಬಾ, ಮಡಚಿಟ್ಟ ಕುರ್ಚಿಯನ್ನು ಡಿಕ್ಕಿಯಿಂದ ಹೊರತೆಗೆದು ಬಿಡಿಸಿ, ಸೂರ್ಯಾಭಿಮುಖವಾಗಿ ಹಾಕಿ ಕುಳಿತುಕೊಳ್ಳುತ್ತಾನೆ.

ಅರ್ಧ ಗಂಟೆ ಕಳೆಯುತ್ತಿದ್ದಂತೆ ಅವನ ಮೊಮ್ಮಗ ಬರುತ್ತಾನೆ. ಉದ್ಯಾನದ ಒಳಗೆ ಬರಲು 3 ಪ್ರವೇಶ ದ್ವಾರಗಳಿದ್ದರೂ ಆತ ಕಬ್ಬಿಣದ ಬೇಲಿಯ ಮಧ್ಯೆ ನುಸುಳಿಯೇ ಬರುವುದು. 100 ಕಿಲೋ ತೂಗುವ 16 ವರ್ಷದ ಮೊಮ್ಮಗ ತೂರಿಕೊಂಡು ಬರಲು ವ್ಯವಸ್ಥೆ ಮಾಡಿಕೊಟ್ಟವರು ಯಾರೋ ಗೊತ್ತಿಲ್ಲ. ವಿಶೇಷವೆಂದರೆ ಉದ್ಯಾನದ ಕಬ್ಬಿಣದ ಬೇಲಿಯ ಅಲ್ಲಲ್ಲಿ 3-4 ಕಡೆ ಈ ವ್ಯವಸ್ಥೆಯಿದೆ!

ಬರುವಾಗ ಮೊಮ್ಮಗನ ಕೈಯಲ್ಲಿ ಲೇಸ್ ಕಂಪನಿಯ ದೊಡ್ಡ ಚಿಪ್ಸ್ ಪ್ಯಾಕೆಟ್, ಒಂದೆರಡು ಸ್ಯಾಂಡ್‌ವಿಚ್, ಒಂದಿಷ್ಟು ಚಾಕಲೇಟ್, ಎರಡೂವರೆ ಲೀಟರ್‌ನ ಪೆಪ್ಸಿ ಬಾಟಲ್ ಇರುತ್ತವೆ. ಅಜ್ಜ-ಮೊಮ್ಮಗ ಕೂತು ಅರ್ಧ ಗಂಟೆಯಲ್ಲಿ ಅದನ್ನೆಲ್ಲ ಮುಗಿಸಿದ ನಂತರ ಮೊಮ್ಮಗ ಅಲ್ಲಿಂದ ಹೊರಡುತ್ತಾನೆ. ಮುಂದೇನು ಎಂದು ಕೇಳಬೇಡಿ, ಇನ್ನೊಂದು ಅರ್ಧ ಗಂಟೆ ಬಿಟ್ಟು ಬಾಬಾನೂ ಹೊರಡುತ್ತಾನೆ. ಚಾಕಲೇಟ್ ಕಾಗದ, ಖಾಲಿ ಚಿಪ್ಸ್ ಪ್ಯಾಕೆಟ್, ಖಾಲಿ ಪೆಪ್ಸಿ ಬಾಟಲ್, ಪ್ಲಾಸ್ಟಿಕ್ ಚೀಲಗಳೆಲ್ಲವೂ ಅ ಬಾಕಿ!

ಹೇಳೋಣವೆಂದರೆ ದೇಶ, ಭಾಷೆ, ವಯಸ್ಸು ಎಲ್ಲವೂ ಅಡ್ಡ ಬರುತ್ತವೆ! ಸುಮ್ಮನೆ ತಲೆ ಕೊಡವಿಕೊಂಡು ಮುನ್ನಡೆಯಬೇಕು ಅಷ್ಟೇ. ಇದು ಬಹುತೇಕ ಎಲ್ಲೆಡೆ ಇದ್ದದ್ದೇ. ನಿತ್ಯ ನಿರಂತರ ಪ್ರಕೃತಿಯ ಮೇಲೆ ದೌರ್ಜನ್ಯ ಎಸಗುವವರ ನಡುವೆ ಕೆಲವರು ಬದಲಿ ವ್ಯವಸ್ಥೆ ಕಲ್ಪಿಸಿಕೊಡಲು ಮುಂದಾಗುತ್ತಾರೆ. ಪ್ರಕೃತಿಗೆ ಪರ್ಯಾಯವಾಗಿ ನಿರ್ಮಿಸಿದ ಕೃತಕ, ಉಚಿತ ಸೌಲಭ್ಯದ ಜವಾಬ್ದಾರಿಯನ್ನೂ ಬೇರೆಯವರೇ ಹೊರಬೇಕು ಎಂದರೆ, ಅದು ತೀರಾ ಅತಿಯಾಯಿತು!

**- ಕಿರಣ್ ಉಪಾಧ್ಯಾಯ,** ಬಹ್ರೈನ್

## 11-11-2025 ದಿನ ಭವಿಷ್ಯ

**ಮೇಷ:** ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂಜರಿಯದಿರಿ. ಆತ್ಮವಿಶ್ವಾಸದ ನಿಮ್ಮನ್ನು ಆವರಿಸಲು ಬಿಡಬೇಡಿ, ಏಕೆಂದರೆ ಅದು ಕೇವಲ ನಿಮ್ಮ ಸಮಸ್ಯೆಯನ್ನು ಮಾತ್ರ ಸಂಕೀರ್ಣಗೊಳಿಸುತ್ತದೆ ಮತ್ತು ನಿಮ್ಮ ಪ್ರಗತಿಯನ್ನು ಹಾಳುಗೆಡವಬಲ್ಲದು. ನಿಮ್ಮ ಆತ್ಮವಿಶ್ವಾಸವನ್ನು ಮರಳಿ ಪಡೆಯಲು ನಿಮ್ಮನ್ನು ವ್ಯಕ್ತಪಡಿಸಿ ಮತ್ತು ಸಮಸ್ಯೆಯನ್ನು ನಿಭಾಯಿಸಲು ಹೃತ್ಪೂರ್ವಕವಾದ ನಗು ಚೆಲ್ಲಿ.

**ವೃಷಭ:** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ನಿಮ್ಮ ಹಿಂದಿನ ಸಾಲವನ್ನು ಇಂದಿನವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು. ಕುಟುಂಬದ ಸದಸ್ಯರ ಉತ್ತಮ ಸಲಹೆ ಇಂದು ನಿಮಗೆ ಲಾಭ ತರುತ್ತದೆ. ಸೆಕ್ಸ್ ಅಪೀಲ್ ಬೇಕಾದ ಫಲಿತಾಂಶವನ್ನು ನೀಡುತ್ತದೆ.

**ಮಿಥುನ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ. ನೀವು ಇಂದು ಪ್ರೀತಿ ಮಾಡುವ ಅವಕಾಶವನ್ನು ಕಳೆದುಕೊಳ್ಳದಿದ್ದಲ್ಲಿ, ನಿಮ್ಮ ಇಡೀ ಜೀವನದಲ್ಲಿ ಈ ದಿನವನ್ನು ಎಂದಿಗೂ ಮರೆಯುವುದಿಲ್ಲ.

**ಕರ್ಕಾಟಕ:** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಮಕ್ಕಳು ನಿಮಗೆ ಮನೆಕೆಲಸಗಳನ್ನು ಮಾಡಲು ಸಹಾಯ ಮಾಡುತ್ತಾರೆ. ಈ ದಿನ ನಿಮ್ಮ ಪ್ರೀತಿ ಜೀವನದ ವಿಚಾರದಲ್ಲಿ ಅಸಾಧಾರಣವಾಗಿದೆ. ಪ್ರೀತಿ ಮಾಡುತ್ತೀರಿ.

**ಸಿಂಹ:** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

**ಕನ್ಯಾ:** ನೀವು ಪರಿಸ್ಥಿತಿಯ ನಿಯಂತ್ರಣ ಹೊಂದುತ್ತಿದ್ದಂತೆ ನಿಮ್ಮ ಆತಂಕ ಕಣ್ಮರೆಯಾಗುತ್ತದೆ. ಇದು ಧೈರ್ಯದ ಮೊದಲ ಸ್ಪರ್ಶದಲ್ಲಿ ಕುಸಿದುಹೋಗುವ ಸಾಬೂನಿನ ಗುಳ್ಳೆಯಷ್ಟೇ ಗಟ್ಟಿಯೆಂದು ನೀವು ಅರ್ಥ ಮಾಡಿಕೊಳ್ಳುತ್ತೀರಿ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

**ತುಲಾ:** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ.

**ವೃಶ್ಚಿಕ:** ಪ್ರೀತಿ, ಭರವಸೆ, ನಂಬಿಕೆ, ಸಹಾನುಭೂತಿ, ಆಶಾವಾದ ಮತ್ತು ನಿಷ್ಠೆಗಳಂಥ ಧನಾತ್ಮಕ ಭಾವನೆಗಳನ್ನು ಗ್ರಹಿಸಲು ಮನಸ್ಸನ್ನು ಪ್ರೋತ್ಸಾಹಿಸಿ. ಒಮ್ಮೆ ಈ ಭಾವನೆಗಳು ಸಂಪೂರ್ಣವಾಗಿ ಹತೋಟಿಗೆ ತೆಗೆದುಕೊಂಡ ನಂತರ ಮನಸ್ಸು ತಾನಾಗಿಯೇ ಪ್ರತಿ ಪರಿಸ್ಥಿತಿಗೂ ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ.

**ಧನು:** ನೀವು ವಿಶ್ರಾಂತಿ ಪಡೆಯಲು ಸಾಧ್ಯವಾಗುವ ಒಂದು ದಿನ. ನಿಮ್ಮ ಸ್ನಾಯುಗಳಿಗೆ ವಿಶ್ರಾಂತಿ ನೀಡಲು ತೈಲದಿಂದ ನಿಮ್ಮ ದೇಹಕ್ಕೆ ಮಸಾಜ್ ಮಾಡಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ಸಂಬಂಧಿಗಳು / ಸ್ನೇಹಿತರು ಒಂದು ಅದ್ಭುತ ಸಂಜೆಗಾಗಿ ಬರುತ್ತಾರೆ.

**ಮಕರ:** ನಿಮ್ಮ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಮಾನಸಿಕ ಸ್ಪಷ್ಟತೆ ಅಗತ್ಯವಾಗಿರುತ್ತದೆ. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ನೀವು ನಿಮ್ಮ ದೈನಂದಿನ ಕಾರ್ಯಕ್ರಮಗಳಿಂದ ಬಿಡುವು ಮಾಡಿಕೊಂಡು ನಿಮ್ಮ ಸ್ನೇಹಿತರೊಂದಿಗೆ ಇಂದು ಹೊರಗೆ ಹೋಗಬೇಕು.

**ಕುಂಭ:** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕಸ್ಥೈರ್ಯವನ್ನು ಹೆಚ್ಚಿಸುತ್ತದೆ. ವಿದೇಶದಲ್ಲಿ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ಇಂದು ಸಾಕಷ್ಟು ಹಣದ ಲಾಭವನ್ನು ಪಡೆಯಬಹುದು. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ. ನೀವು ಮೊದಲ ನೋಟದಲ್ಲೇ ಪ್ರೀತಿಯಲ್ಲಿ ಬೀಳಬಹುದು.

**ಮೀನ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

# ಕೆಲಸದವರ ಕಷ್ಟ ಅಷ್ಟಿಷ್ಟಲ್ಲ

**“ ತಮಾಶೆಗಳು, ಒಬ್ಬರನ್ನೊಬ್ಬರು ಕಾಲೆಳೆಯುವುದು, ಏನಾದ್ರೂ ವರ್ಚುವಲ್ ಗೇಮ್ ಆಡುವುದು ಎಲ್ಲ ಬಹಳ ರೋಚಕವಾಗಿಯೇ ನಡೆಯಿತು. ಮೊದಲ ಮೀಟಿಂಗ್ ನಲ್ಲಿಯೇ, ಇಡೀ ದಿನ ಮನೇಲೆ ಇರ್ತೀವಲ್ಲ, ಯಾವುದು ನ್ಯೂ ನಾರ್ಮಲ್ಸ್ ಆಗಿದೆ ನಿಮಗೆ ಎಂದೇನೋ ಕೇಳಿದ್ದು ಯಾರದು... ಬೀನಾ... ಹೌದು ಅವಳೇ.**

ಇತ್ತೀಚೆಗೆ ಬಿಡುಗಡೆಯಾದ ಸುಮಂಗಲಾ ಅವರ ಎನ್ನಾತ್ಮ ಕಂಪಮಿದು ಕಾದಂಬರಿಯಿಂದ ಆಯ್ದ ಭಾಗ ಇಲ್ಲಿದೆ.

ಸುಮಂಗಲಾ ಲಾಕ್ ಡೌನ್ ಆರಂಭದಲ್ಲಿ, ಮೀಟ್ ಓವರ್ ಕಾಫಿ, ಮೀಟ್ ಓವರ್ ಎ ಡ್ರಿಂಕ್ ಎಂದೆಲ್ಲ ಮೊದಲ ಒಂದೆರಡು ತಿಂಗಳು ವಾರದ ಕೊನೆಯಲ್ಲಿ ಶುಕ್ರವಾರ ಸಂಜೆ ಆರು ಗಂಟೆಯಿಂದ ಏಳು ಗಂಟೆಯವರೆಗೆ ಆಫೀಸಿನ ಆಲ್ ಲೇಡಿಸ್ ಜೂಮ್ ಮೀಟಿಂಗುಗಳು ನಡೆದವು.

ತಮಾಶೆಗಳು, ಒಬ್ಬರನ್ನೊಬ್ಬರು ಕಾಲೆಳೆಯುವುದು, ಏನಾದ್ರೂ ವರ್ಚುವಲ್ ಗೇಮ್ ಆಡುವುದು ಎಲ್ಲ ಬಹಳ ರೋಚಕವಾಗಿಯೇ ನಡೆಯಿತು. ಮೊದಲ ಮೀಟಿಂಗ್‌ನಲ್ಲಿಯೇ, ಇಡೀ ದಿನ ಮನೇಲೆ ಇರ್ತೀವಲ್ಲ, ಯಾವುದು ನ್ಯೂ ನಾರ್ಮಲ್ಸ್ ಆಗಿದೆ ನಿಮಗೆ ಎಂದೇನೋ ಕೇಳಿದ್ದು ಯಾರದು... ಬೀನಾ... ಹೌದು ಅವಳೇ.

ಕೇಳಿದವಳೇ ಅಷ್ಟೇ ತಟ್ಟನೆ ನಿಮ್ಮಲ್ಲಿ ಯಾರೆಲ್ಲ ಈಗ ಬ್ರೇಸಿಯರ್ಸ್ ಹಾಕೋದು ಬಿಟ್ಟಿದ್ದೀರಿ... ಐ ಲೆಫ್ಟ್ ವೇರಿಂಗ್... ಸೋ ರಿಲಾಕ್ಸಿಂಗ್ ಎನ್ನುತ್ತ ಜೋರಾಗಿ ನಕ್ಕಿದ್ದಳಲ್ಲ... ಎಷ್ಟು ಬಿಡುಬೀಸಾಗಿ ಹೀಗೆ ತಟ್ಟನೆ ಏನೋ ಹೇಳಿಬಿಡ್ತಾಳಲ್ಲ ಅಂತ ವಿನುತಳಿಗೆ ಯಾವಾಗಲೂ ಅಚ್ಚರಿ.

ಅಡುಗೆಗೆ ಒಬ್ಬರು, ಮನೆಗೆಲಸಕ್ಕೆ ಒಬ್ಬರು ಹೀಗೆ ಇಬ್ಬಿಬ್ಬರನ್ನು ಮನೆಗೆಲಸಕ್ಕೆ ಇಟ್ಟು ಕೊಂಡ ಅಪ್ಪರ್ ಕ್ಲಾಸ್ ಮತ್ತು ಅಪ್ಪರ್ ಮಿಡಲ್ ಕ್ಲಾಸಿನವರೇ ಅವರಲ್ಲಿ ಹೆಚ್ಚಿನವರಿದ್ದರು. ವಿನುತ, ಮೇಗಲೆ, ರಾಜೋ, ಹೀಗೆ ನಾಲ್ಕಾರು ಜನರ ಲೋಕವಾಗಿರುವ ಮಧ್ಯಮ ವರ್ಗ ಎಂಬ ವ್ಯಾಖ್ಯಾನಕ್ಕಿಂತ ಮೇಲಿದ್ದವರು.

ಇದೀಗ ಲಾಕ್‌ಡೌನ್ ಆದಾಗಿನಿಂದ ಮನೆಗೆಲಸವನ್ನು ಪೂರ್ಣ ತಾವೇ ಮಾಡಿಕೊಳ್ಳುವುದು ಎಷ್ಟೆಲ್ಲ ಕಷ್ಟವಾಗ್ತಿದೆ, ಮನೆಗೆಲಸ, ಮಕ್ಕಳನ್ನು ಸಂಭಾಳಿಸುವುದು, ಜೊತೆಗೆ ಹೊತ್ತಲ್ಲದ ಹೊತ್ತಿನಲ್ಲಿಯೂ ಆಫೀಸಿನ ಜೂಮ್ ಮೀಟಿಂಗ್‌ಗಳು... ಒಂದಿಬ್ಬರು ಗಂಡ, ಮಕ್ಕಳು ತಮಗೆ ಸಹಾಯ ಮಾಡುತ್ತಾರೆ ಎಂದೊಡನೆ ಉಳಿದವರು, ಗಂಡಸರನ್ನು ಮನೆಗೆಲಸದಲ್ಲಿ ತೊಡಗಿಸಿಕೊಳ್ಳಲು ಏನೆಲ್ಲ ಉಪಾಯ ಹೂಡಬೇಕು ಎಂದು... ದಿನಸಿ ಸಾಮಾನುಗಳು, ಹಣ್ಣು ತರಕಾರಿಗಳನ್ನು ಕೊಳ್ಳುವುದು ಎಷ್ಟು ಕಷ್ಟವಾಗ್ತಿದೆ ಎಂದು... ಗಂಡ, ಹೆಂಡತಿ, ಒಂದೋ ಎರಡೋ ಮಕ್ಕಳು, ಇಷ್ಟು ಜನರಿಗೆ ಮೂರು ನಾಲ್ಕು ಬೆಡ್ ರೂಮುಗಳಿರುವ ದೊಡ್ಡ ಮನೆಯಲ್ಲಿದ್ದುಕೊಂಡೂ ಮೂರೂ ಹೊತ್ತು ಮನೆಯವರೆಲ್ಲರೂ ಪರಸ್ಪರರ ಕಣ್ಣಳತೆಯಲ್ಲಿಯೇ ಇಡೀ ದಿನ ಕಳೆಯುವುದು ಹ್ಯಾಗೆ ಉಸಿರುಗಟ್ಟುತ್ತಿದೆ ಎಂದು... ಹೀಗೆಯೇ ಉಳ್ಳವರ ಕೊರೋನಾ ಕಷ್ಟಗಳು ಮತ್ತು ಕಲ್ಪಿತ ಸಂಕಷ್ಟಗಳು.

ಅಲ್ಲಾ... ಇವರುಗಳು ಕೆಲಸದವರಿಲ್ಲದೇ ತಮಗೆ ಎಷ್ಟು ಕುತ್ತಿಗೆಗೆ ಬಂದಿದೆ ಅಂತ ಗೋಳಾಡ್ತಿದಾರಲ್ಲ... ಆ ಮನೆಗೆಲಸದವರು ಕೆಲಸವೇ ಇಲ್ಲದೇ, ಹೊಟ್ಟೆಪಾಡಿಗೂ ಒದ್ದಾಡ್ತಾ ಇದ್ದಾರೆ ಅಂತ ಒಬ್ಬರಾದರೂ ಕಾಳಜಿಯಿಂದ ಮಾತಾಡಿದ್ರಾ, ನೋಡು ಎಂದು ಮೇಗಲೆ ಚಾಟ್ ಬಾಕ್ಸಿನಲ್ಲಿ ವಿನುತಳಿಗಷ್ಟೇ ಮೆಸೇಜ್ ಹಾಕಿದ್ದಳು.

ವಿನುತಳ ಮನೆಗೆಲಸಕ್ಕೆ ಬರುವ ನಾಗಮ್ಮ ಸೇರಿದಂತೆ ಯಾರಿಗೂ ಮೊದಲ ಲಾಕ್ ಡೌನ್‌ನಿಂದಲೇ ಅಪಾರ್ಟ್‌ಮೆಂಟಿನ ಒಳಗೆ ಬಿಟ್ಟಿರಲಿಲ್ಲ. ಮಾರ್ಚಿ ತಿಂಗಳಿನ ಸಂಬಳದ ಜೊತೆಗೆ ಇನ್ನೆರಡು ಸಾವಿರ ಸೇರಿಸಿ ಕೊಟ್ಟು ವಿನುತಳೂ ಮಹದುಪಕಾರ ಮಾಡಿದ ಫೇಸ್ ನೀಡಿ ಸುಮ್ಮನಾಗಿದ್ದಳು. ಚಾಟ್ ಬಾಕ್ಸಿನಲ್ಲಿ ಮೇಗಲೆಯ ಸಂದೇಶ ನೋಡುತ್ತಿದ್ದಂತೆ, ನಾಗಮ್ಮನಿಗೆ ಲಾಕ್‌ಡೌನ್ ಮುಗಿದ ಮೇಲೆ ಪುನಃ ಬರುವಂತೆ ಒತ್ತಿ ಹೇಳಿ ಕಳಿಸಿದ್ದು, ಅವಳು ಬಾಡಿದ ಬದನೇಕಾಯಿಯಂಥ ಮುಖ ಹೊತ್ತು, ಏನೂ ಮಾತಾಡದೇ, ಬರಿದೇ ತಲೆಯಲ್ಲಾಡಿಸಿ ಹೋಗಿದ್ದು ನೆನಪಾಗಿ ಮನಸ್ಸಿಗೆ ಚುಳ್ಳೆನ್ನಿಸಿತು.

ನಾಲ್ಕನೆಯ ಶುಕ್ರವಾರದ ಸಂಜೆಯ ಮೀಟಿಂಗಿನಲ್ಲಿ ಇರಬೇಕು... ಸ್ಟಾರ್‌ಬಕ್ಸ್ ಕಾಫಿ ಕುಡಿಯದೇ ತನಗೆ ಹೇಗೆ ಕಿರಿಕಿರಿ ಅನ್ನಿಸಿ ಮನೆಯಲ್ಲಿ ಎಲ್ಲರ ಮೇಲೆ ರೇಗುತ್ತಿದ್ದೆ ಎಂದು ಒಬ್ಬಳು ವರ್ಣಿಸಿದಳು. ಇನ್ನೊಬ್ಬಳು ಬ್ರಿಗೇಡ್ ರಸ್ತೆಯಲ್ಲಿ ಅಡ್ಡಾಡದೇ ಏನೋ ಕಳೆದು ಕೊಂಡಂತೆ ಅನ್ನಿಸ್ತಿದೆ ಎಂದು ನಾಟಕೀಯವಾಗಿ ನುಡಿದಳು.

ಮನೆಯಲ್ಲಿಯೇ ಹೀಗೆ ಇರೋದು ಹ್ಯಾಗೆ ಕಾಲು ಕಟ್ಟಿ ಹಾಕಿದಂತೆ ಆಗಿದೆ ಎಂದು ಇನ್ನೊಂದಿಬ್ಬರು ಹುಡುಗಿಯರು ವರ್ಣಿಸುತ್ತಿದ್ದಂತೆ ಹೌದೌದು... ಎಲ್ಲರಿಗೂ ಒಂದಲ್ಲ ಒಂಥರಾ ಗೂಟಕ್ಕೆ ಕಾಲು ಕಟ್ಟಿ ಹಾಕಿದಂಗೆ. ಅದರಲ್ಲಿಯೂ ಎಕ್ಸ್‌ಟ್ರಾ ಮೆರಿಟಲ್ ಅಫರ್ಸ್ ಇಟ್ಟುಕೊಂಡವರಂತೂ ಹೊರಗೆಲ್ಲಿಯೂ ಒಬ್ಬರಿಗೊಬ್ಬರು ಮೀಟ್ ಮಾಡುವಂತೆಯೇ ಇಲ್ಲವಲ್ಲ... ಪಾಪ... ಐ ರಿಯಲೀ ಫೀಲ್ ಸ್ಯಾಡ್ ಫಾರ್ ದೆಮ್ ಎಂದು ಬೀನಾ ಘಟ್ಟನೆ ಹೇಳಿದ್ದಳಲ್ಲ... ಯಾರನ್ನು ಉದ್ದೇಶಿಸಿ ಎಂದು ವಿನುತ ಅಚ್ಚರಿಪಟ್ಟಿದ್ದಳು.

ಅಬ್ಬ... ಈ ಬೀನಾ ಎಂದರೆ ಎಕೆ 47 ಬಂದೂಕಿನಂತೆ. ಮಾತಿನ ಗೋಲಿ ಥಡಥಡನೆ ಉದುರುತ್ತೆ... ಎಲ್ಲಿ, ಯಾರಿಗೆ ಗುರಿ ಇಟ್ಟಿರತಾಳೆ ಅಂತ ಬೇಗನೆ ಗೊತ್ತಾಗೋದೇ ಇಲ್ಲ. ಆಮೇಲೆ ಮನೆಯಿಂದ ಕೆಲಸ ಎನ್ನುವುದು ಸದ್ಯಕ್ಕೆ ಮುಗಿಯುವಂಥದಲ್ಲ, ಅನಿಶ್ಚಿತವಾಗಿ ಮುಂದುವರೆಯುತ್ತದೆ ಎಂಬುದು ಅರಿವಾದಂತೆ ಒಬ್ಬೊಬ್ಬರೇ ಉತ್ಸಾಹ ಕಳೆದುಕೊಳ್ಳುತ್ತ ಏನೇನೊ ನೆವಗಳನ್ನು ಹೇಳಿಕೊಳ್ಳುತ್ತ ಈ ಶುಕ್ರವಾರದ ಸಂಜೆಯ ವರ್ಚುವಲ್ ಸಭೆಯಿಂದ ಕಳಚಿಕೊಳ್ಳತೊಡಗಿದರು.

ಇದಾಗಿ ಒಂದು ತಿಂಗಳಲ್ಲಿಯೇ ಮೇಗಲೆ ಇಲ್ಲಿ ಕೆಲಸ ಬಿಟ್ಟಿದ್ದಳು. ಯಾಕೆ ಎಂದು ನಿರ್ದಿಷ್ಟ ಕಾರಣ ಹೇಳಿರಲಿಲ್ಲ. ಅಮ್ಮಂಗೆ ಮಂಡಿಚಿಪ್ಪು ರಿಪ್ಲೇಸ್‌ಮೆಂಟ್ ಆಪರೇಶನ್ನಿದೆ. ನನಗೂ ಸ್ವಲ್ಪ ಬ್ರೇಕ್ ಬೇಕು ಅನ್ನಿಸ್ತಿದೆ ಎಂದಷ್ಟೆ ಹೇಳಿದ್ದಳು. ಹಾಗೆಂದು ತಿಂಗಳಾನುಗಟ್ಟಲೆ ಬ್ರೇಕ್ ತೆಗೆದುಕೊಂಡಿರಲಿಲ್ಲ. ಮತ್ತೊಂದು ತಿಂಗಳಲ್ಲಿಯೇ ಬೇರೊಂದು ಕೆಲಸಕ್ಕೆ ಸೇರಿದ್ದಳು. ಬಹುಶಃ ಇಲ್ಲಿ ಬಿಡುವ ಮೊದಲೇ ಬೇರೆಡೆ ಹುಡುಕಿದ್ದಿರಬಹುದು.



ಮೇಗಲೆ ಕೆಲಸ ಬಿಡುತ್ತಾಳಂತೆ ಎಂದು ವಿನುತಳಿಗೆ ಮೊದಲು ಸುದ್ದಿ ತಿಳಿಸಿದ್ದು ರಾಜೋ. ಅದೊಂದು ಬೆಳಗ್ಗೆಯೇ ಫೋನ್ ಮಾಡಿದವಳು, ನಂಗೆ ಏನು ಅನುಮಾನ ಗೊತ್ತಾ... ಎಂದು ಪಿಸುಗುಟ್ಟಿದವಳು, ಅವತ್ತು ಜೂಮ್ ಮೀಟಿಂಗಿನಲ್ಲಿ ಬೀನಾ ಏನಂದಳು ಅಂತ ನೆನಪಿದೆಯಾ? ಅದೇ.. ಎಕ್ಸ್‌ಟ್ರಾ ಮೆರಿಟಲ್ ಅಫರ್ಸ್ ಇಟ್ಟುಕೊಂಡವರು ಅಂತ ಕಾಮೆಂಟಿಸಿದ್ದಳಲ್ಲ... ಅದು ಮೇಗಲೆ ಕುರಿತೇ ಇರಬೇಕು.

ಮೊದ್ಲಿಂದನೂ ಈ ಬೀನಾಗೆ ಮೇಗಲೆಯ ನೆರಳು ಕಂಡ್ರೆ ಆಗಲ್ಲ. ಏನಕ್ಕೆ ಅಂತ ಗೊತ್ತಿಲ್ಲಪ್ಪ... ಇಬ್ರೂ ಬೆನ್ನ ಹಿಂದೆ ಒಬ್ಬರಿಗೊಬ್ಬರು ಬೈಯ್ಕೋತಾನೆ ಇರತಿದ್ದರು. ಅವತ್ತು ಬೀನಾ ಹಂಗಂದ ಮೇಲೆ ಮುಂದಿನ ಯಾವುದೇ ಶುಕ್ರವಾರದ ಸಂಜೆಯ ಜೂಮ್ ಮೀಟಿಂಗಿಗೂ ಮೇಗಲೆ ಜಾಯಿನ್ ಆಗಲೇ ಇಲ್ಲ... ನೆನಪಿದೆ ತಾನೆ ಎಂದು ಮತ್ತಗೆ ವಿವರಿಸಿದ್ದಳು.

ಆದರೆ ಈ ಬೀನಾಗೆ ಹೇಗೆ ಅನುಮಾನ ಬಂತು... ಹೊರಗಡೆ ಎಲ್ಲಾದ್ರೂ ಮೇಗಲೆ ಆತನೊಂದಿಗೆ ಇದ್ದಿದ್ದನ್ನು ಈಕೆ ನೋಡಿರಬಹುದೇ ಎಂದು ರಾಜೋ, ವಿನುತಾ ಮಾತಾಡಿ ಕೊಂಡರು. ಅರೆ ಹೌದಲ್ಲ... ಆ ಜೂಮ್ ಮೀಟಿಂಗುಗಳಿಂದ ಮೊದಲು ಕಳಚಿಕೊಂಡವಳೇ ಮೇಗಲೆ... ಬೀನಾ ಹಾಗೆಂದಾಗ ಮೇಗಲೆಯ ಮುಖಭಾವ ಹೇಗಿತ್ತು ಎಂದು ನೆನಪಿಸಿಕೊಳ್ಳಲೆತ್ನಿಸಿದಳು.

ಆದರೆ ಜೂಮ್ ಪರದೆಯಲ್ಲಿ ಕಾಣುತ್ತಿದ್ದ ಸ್ಟಾಂಪ್ ಗಾತ್ರದ ವಿಡಿಯೋದಲ್ಲಿ ಮೇಗಲೆಯ ಮುಖಭಾವದಲ್ಲಾದ ಬದಲಾವಣೆಗಳನ್ನು ಕಾಣುವಂತೆಯೂ ಇರಲಿಲ್ಲ. ಹೊಸ ಕೆಲಸಕ್ಕೆ ಸೇರಿದ ವಾರದ ನಂತರ ಫೋನ್ ಮಾಡಿದ ಮೇಗಲೆ ವಿಚಿತ್ರ ಬೇಡಿಕೆ ಇಟ್ಟಿದ್ದಳು.

ಆಫೀಸಿನ ಕಾಂಟಾಕ್ಟ್ ಇಮೇಲ್ ಐಡಿಗೆ ಬರೋ ಮೇಲ್‌ಗಳನ್ನು ನಾನೇ ಹ್ಯಾಂಡಲ್ ಮಾಡತಿದ್ದೆನಲ್ಲ... ನಾನು ಬಿಡಕ್ಕೂ ಎರಡು ವಾರ ಮುಂಚೆ ಒಂದು ಜಾಬ್ ಅಪ್ಲಿಕೇಶನ್ ಮೇಲ್ ಬಂದಿತ್ತು. ನಾನು ನಮ್ಮ ಮೂರ್ನಾಲ್ಕು ಪ್ರೊಗ್ರಾಮ್ ಮ್ಯಾನೇಜರ್‌ಗಳಿಗೂ ಫೋನ್ ಮಾಡಿ ಕೇಳಿದೆ. ಎಲ್ಲರದೂ ಒಂದೇ ಉತ್ತರ... ಈ ಕೊರೊನಾ ಕಾಲದಲ್ಲಿ ನಮಗೇ ಹೆಚ್ಚು ಕೆಲಸ ಇಲ್ಲ, ಇನ್ನು ಹೊಸಬರನ್ನ ಏನಕ್ಕೆ ತಗಳ್ಳದು ಅಂತ.

ಮೊದಲೇ ಕಾಸ್ಟ್ ಕಟ್‌ಡೌನ್ ಬೇರೆ ನಡೀತಿತ್ತಲ್ಲ... ಆ ಹುಡುಗಿಯ ಮೊದಲ ಹೆಸರಷ್ಟೇ ನೆನಪಿದೆ, ಅದೂ ಹೌದೋ ಅಲ್ಲವೋ ಅಂತ ಅನುಮಾನ... ಏನು ಮಾಡಿದರೂ ಪೂರ್ಣ ಹೆಸರು ನೆನಪಾಗುತ್ತಿಲ್ಲ. ಅವಳ ಎಲ್ಲ ಡಿಟೇಲ್ಸ್ ಆಫೀಸಿನ ಕಾಂಟಾಕ್ಟ್ ಇಮೇಲ್ ಐಡಿಯಲ್ಲಿದೆ. ಈಗ ನೀನು ಅದನ್ನು ಹ್ಯಾಂಡಲ್ ಮಾಡುತಾ ಇದ್ದೀಯಲ್ಲ... ಅದನ್ನು ಚೂರು ಹುಡುಕಿ ನಂಗೆ ಹೇಳ್ತೀಯಾ? ಮೇಗಲೆ ಕೆಲಸ ಬಿಟ್ಟ ನಂತರ, ಅವಳ ಜಾಗಕ್ಕೆ ಯಾರನ್ನೂ ಹೊಸದಾಗಿ ತೆಗೆದುಕೊಳ್ಳದೇ ಅವಳೆಲ್ಲ ಕೆಲಸಗಳನ್ನು ಇದ್ದವರಲ್ಲೇ ಹಂಚಿಕೆ ಮಾಡಿ ಬಿಟ್ಟಿದ್ದರು.

ರಾಜೋ ಮತ್ತು ಅವಳ ಜೊತೆಗಿದ್ದ ಇನ್ನಿಬ್ಬರು ಹುಡುಗರಿಗೆ ಹೆಚ್ಚುವರಿ ಅಡ್ಮಿನ್ ಕೆಲಸಗಳ ಹಂಚಿಕೆಯಾಗಿತ್ತು. ವಿನುತ ಐದಾರು ವರ್ಷಗಳಿಂದ ಅದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದರಿಂದ, ಎಲ್ಲ ಪ್ರಾಜೆಕ್ಟ್‌ಗಳ ವಿವರಗಳು ಆಕೆಗೆ ಗೊತ್ತಿದೆಯೆಂಬ ಕಾರಣಕ್ಕೆ ಆಫೀಸಿನ ಕಾಂಟಾಕ್ಟ್ ವಿಳಾಸಕ್ಕೆ ಬರುವ ಇಮೇಲುಗಳ ಜೊತೆ ವ್ಯವಹರಿಸುವ ಕೆಲಸವನ್ನು ಆಕೆಗೆ ವಹಿಸಿದ್ದರು.

ಮೇಗಲೆ ಹೇಳಿದ ಆ ಹುಡುಗಿಯ ಹೆಸರು ಹಾಕಿ ಹುಡುಕಿದಳು. ಹಳೆಯ ಇಮೇಲ್ ಸಿಕ್ಕಿತು. ಜೊತೆಗಿದ್ದ ಪ್ರೊಫೈಲಿನಲ್ಲಿ ಲಿಂಕ್ಡ್‌ಇನ್ ವಿಳಾಸವಿತ್ತು. ಅದನ್ನು ಕ್ಲಿಕ್ ಮಾಡಿದಳು. ಲಿಂಕ್ಡ್ ಇನ್ ಪ್ರೊಫೈಲಿನಲ್ಲಿ ಆಕೆ ಸದ್ಯ ಕೆಲಸ ಮಾಡುತ್ತಿರುವ ಕಂಪನಿಯ ಹೆಸರಿತ್ತು. ಅಂದರೆ ಆ ಹುಡುಗಿ ಆದಾಗಲೇ ಹೊಸ ಕೆಲಸಕ್ಕೆ ಸೇರಿದ್ದಳು. ಮೇಗಲೆಗೆ ಫೋನ್ ಮಾಡಿ ಹೇಳಿದಳು.

ಅಬ್ಬ... ಸದ್ಯ... ಎಲ್ಲೋ ಒಂದು ಕಡೆ ಸೇರಿದ್ದಾಳಲ್ಲ ಎಂದು ಸಮಾಧಾನದ ಉಸಿರು ಬಿಟ್ಟಳು. ಯಾರೀ ಹುಡುಗಿ, ಇವಳಿಗೇಕೆ ಈಗ ಇಷ್ಟು ಕಾಳಜಿ ಹುಟ್ಟಿತು ಎಂದು ಕೇಳ ಬೇಕೆನ್ನುವಷ್ಟರಲ್ಲಿ ಮೇಗಲೆಯೇ ಮೆತ್ತಗೆ ಹೇಳಿದಳು... ನನ್ನ ಗಂಡ ತೀರಿಕೊಂಡ ಮೇಲೆ ನಾನೊಬ್ಬರನ್ನು ಇಷ್ಟಪಟ್ಟಿದ್ದೆನಲ್ಲ... ಅವರ ಮಗಳು ಈಕೆ. ಒಂದೆರಡು ಸಲ ಮಾತಿನ ನಡುವೆ ಆಕೆಯ ಹೆಸರು ಹೇಳಿದ್ದರು.

ನನ್ನ ಮಗಳಿಗಿಂತ ಚಿಕ್ಕವಳು. ಅಪ್ಲಿಕೇಶನ್ ನೋಡಿದಾಗ ಅವಳೇ ಅನ್ನಿಸಿತು. ಹೋಗ್ಲಿ ಬಿಡು... ಎಲ್ಲೋ ಬೇರೆ ಕಡೆ ಕೆಲಸ ಸಿಕ್ಕಿದೆಯಲ್ಲ... ಯಾರ ಮಗಳಾದರೇನು... ಸ್ವಂತ ಕಾಲಿನ ಮೇಲೆ ನಿಲ್ಲೋದು ಮುಖ್ಯ ಅಲ್ವಾ. ಅದೂ ಈ ಕೊರೊನಾ ಕಾಲದಲ್ಲಿ ಕೆಲಸ ಇಲ್ಲ ಅಂದ್ರೆ, ಒಂಥರಾ ಡಿಪ್ರೆಶನ್ ಅನ್ನಿಸಿಬಿಡುತ್ತೆ.

**» ಗೋವು ಮಹಿಳೆಗೆ ಕೊಟ್ಟ ಶಾಪದಿಂದಾಗಿ ಮನುಷ್ಯರಿಗೆ ಹುಟ್ಟಿದ ಮಕ್ಕಳು ಎದ್ದು ನಿಲ್ಲಲು 8-10 ತಿಂಗಳು ಬೇಕಾಗುತ್ತದೆ. ಪ್ರಾಣಿಗಳಿಗೆ ಹುಟ್ಟಿದ ಮರಿ-ಕರುಗಳು, ಕೆಲವೇ ಸಮಯದಲ್ಲಿ ಎದ್ದು ನಿಂತು ಓಡಾಡುತ್ತವೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ? ಎನ್ನುವಂತೆ, ತಾನು ಸೃಷ್ಟಿಸಿದ ಜೀವಗಳನ್ನು ಭಗವಂತ ತಾನೇ ರಕ್ಷಿಸುತ್ತಾನೆ...**

# ಉಪಕಾರಸ್ಮರಣೆ ಇಲ್ಲದ ಮನುಷ್ಯ



ಪೂರ್ವ ಯುಗದಲ್ಲಿ ಒಬ್ಬಾತ ತನ್ನ ಪತ್ನಿ-ಮಕ್ಕಳ ಜತೆ ನೆಲೆಸಿದ್ದನು. ಅವನ ಮನೆಯಲ್ಲಿ ಒಂದು ಹಸು ಇದ್ದು, ಅದು ಕೊಡುವ ಹಾಲಿನಿಂದ ಕುಟುಂಬಕ್ಕೆ ಸಾಕಾಗುವಷ್ಟು ಮೊಸರು, ತುಪ್ಪ, ಬೆಣ್ಣೆ ಒದಗುತ್ತಿತ್ತು. ಆದರೆ, ಹಸು ಹಾಲು ಕೊಡುವುದನ್ನು ನಿಲ್ಲಿಸಿದ ಕೂಡಲೇ ಮನೆಯವನು ಅದನ್ನು ಕಾಡಿಗೆ ಅಟ್ಟಿದನು.

ಕಾಡಿಗೆ ಬಂದ ಗೋವು ಹಸಿವೆ, ಬಾಯಾರಿಕೆಯಿಂದ ಬಳಲಿತು. ಅದು ಹಾಗೇ ಒಂದು ಶಿವನ ದೇವಸ್ಥಾನಕ್ಕೆ ಹೋಗಿ ಈ ಸ್ವಾರ್ಥಿ ಮನುಷ್ಯ ನನ್ನಿಂದ ಉಪಯೋಗವಾಗುವವರೆಗೆ ಬಳಸಿಕೊಂಡು ಈಗ ನನ್ನನ್ನು ಕಾಡಿಗೆ ಅಟ್ಟಿನೆ. ನನಗೆ ನೀನೇ ದಿಕ್ಕು ಎಂದು ಪ್ರಾರ್ಥಿಸಿತು. ಭಗವಂತನ ಅಗೋಚರ ಶಕ್ತಿಯ ಪ್ರೇರಣೆಯಿಂದ ದೂರದ ಕಾಡಿಗೆ ಹೋಗಿ ನೆಲೆ ಕಂಡು ಕೊಂಡಿತು.

ಒಂದು ದಿನ ಕಟ್ಟಿಗೆ ತರಲು ಒಬ್ಬ ಮಹಿಳೆ ಬಂದಳು. ಹಸುವನ್ನು ನೋಡಿದಳು, ಅದು ಗರ್ಭಿಣಿಯಾಗಿತ್ತು. ಇದು ಕೆಲವೇ ದಿನಗಳಲ್ಲಿ ಕರುವನ್ನು ಹಾಕುತ್ತದೆ. ನಾನು ಹಸುವನ್ನು ಮನೆಗೆ ಕರೆದುಕೊಂಡು ಹೋದರೆ ಮನೆಗೆ ಬೇಕಾದಷ್ಟು ಹಾಲು ಸಿಗುತ್ತದೆ ಮತ್ತು ಮಾರಿ ಹಣ ಸಂಪಾದನೆ ಮಾಡಬಹುದು ಎಂದು ಆಕೆ ಯೋಚಿಸಿ, ಅದನ್ನು ಒಯ್ಯಲು ತನ್ನ ಗಂಡನನ್ನು ಕರೆ ತರಲು ಹೋದಳು. ಆದರೆ ಅವಳು ಗಂಡನೊಂದಿಗೆ ಬರುವ ಹೊತ್ತಿಗೆ ಆ ಹಸು ಅಲ್ಲಿ ಇರಲಿಲ್ಲ, ಬೇರೆ ಕಡೆಗೆ ಹೋಗಿತ್ತು.

ಹಸುವು ಸುರಕ್ಷಿತ ಜಾಗಕ್ಕೆ ತೆರಳಿ ಕರುವನ್ನು ಹಾಕಿತು. ಅದು ಕರು ಹಾಕಿದ ಸ್ವಲ್ಪ ಹೊತ್ತಿಗೆ, ಅದೇ ಮಹಿಳೆ ಕಟ್ಟಿಗೆಯನ್ನು ತರಲು ಕಾಡಿಗೆ ಬಂದಳು, ಹಸುವು ಕರು ಹಾಕಿರುವುದನ್ನು ನೋಡಿದಳು. ಇದು ಈ ಹಿಂದೆ ನಾನು ನೋಡಿದ ಹಸು. ಈಗ ಕರು ಹಾಕಿದೆ; ಹಸು ಮತ್ತು ಕರುವನ್ನು ಮನೆಗೆ ಕರೆದೊಯ್ಯುವೆ ಎಂದು ಸಂತೋಷದಿಂದ ಅಂದುಕೊಂಡು ಗಂಡನನ್ನು ಕರೆತರಲು ಹೊರಟಳು.

ಹಾಗೆ ಹೊರಟಿದ್ದ ಮಹಿಳೆಗೆ ಹಸು, ಅಕ್ಕ ನನಗೆ ಸ್ವಲ್ಪ ಸಹಾಯಮಾಡು. ಈಗ ತಾನೆ ಹುಟ್ಟಿದ ನನ್ನ ಕರು ಕೆಳಗೆ ಬಿದ್ದು ಮಣ್ಣುಮೆತ್ತಿ ಗಲೀಜಾಗಿದೆ, ಅದು ಕಾಲೂರಿ ನಡೆಯಲು ಎಂಟು ತಿಂಗಳು ಬೇಕು. ಕೆಳಗೆ ಬಿದ್ದ ನನ್ನ ಕರುವನ್ನು ಎತ್ತಿ ನನ್ನ ಬೆನ್ನ ಮೇಲೆ ಹಾಕು, ನಾನು ಸುರಕ್ಷಿತ ಜಾಗಕ್ಕೆ ಕರೆದುಕೊಂಡು ಹೋಗಿ ಅದಕ್ಕೆ ನಡೆಯಲು ಬರುವವರೆಗೆ ನೋಡಿಕೊಳ್ಳಬೇಕು ಎಂದಿತು. ಆದರೆ ಮಹಿಳೆ ಕರುವನ್ನು ನೋಡಿದಳು. ಆಗಷ್ಟೇ ಹುಟ್ಟಿದ ಅದರ ಮೈಯೆಲ್ಲಾ ಗಲೀಜಾಗಿತ್ತು. ಗೋವನ್ನು ಉದ್ದೇಶಿಸಿ ಆಕೆ- ಥೀ ಥೀ ಇಷ್ಟು ಗಲೀಜಾದ ನಿನ್ನ ಮಗುವನ್ನು ನಾನು ಮುಟ್ಟಲಾರೆ ನನಗೆ ಅಸಹ್ಯ ಎಂದು ನಿರಾಕರಿಸಿದಳು. ಅಸಹಾಯಕ ಹಸುವಿಗೆ ಕೋಪ ಬಂದು, ನೀವು ಮನುಷ್ಯರು ಉಪಯೋಗ ಸಿಗುವ ತನಕ ಬಳಸಿಕೊಳ್ಳುತ್ತೀರಿ, ನಿಮ್ಮ ಮಗು ಹುಟ್ಟಿದ ಕೂಡಲೇ ನಡೆಯುತ್ತದೆ, ಅದಕ್ಕೇ ನಿಮಗೆ ಇಷ್ಟು ಅಹಂಕಾರ.

ನನ್ನ ಕರು ಹುಟ್ಟಿದ ಎಂಟು ತಿಂಗಳಿಗೆ ತನ್ನ ಕಾಲ ಮೇಲೆ ನಿಲ್ಲುತ್ತದೆ. ಆದರೆ ಈಗ ನಾನು ಶಾಪ ಕೊಡುವೆ, ಇನ್ನು ಮುಂದೆ ನಿಮಗೆ ಹುಟ್ಟಿದ ಮಗು ಎದ್ದು ನಿಲ್ಲಲು ಎಂಟು ತಿಂಗಳು ಆಗುತ್ತದೆ, ಇಲ್ಲಿಯ ತನಕ ಹುಟ್ಟಿದ ನನ್ನ ಕರುಗಳು ನಿಲ್ಲಲು ಎಂಟು ತಿಂಗಳು ಬೇಕಾಗಿತ್ತು. ಇನ್ನು ಮುಂದೆ ಪ್ರಾಣಿ ಸಂಕುಲದಲ್ಲಿ ಮರಿ ಮತ್ತು ಕರುಗಳು ಹುಟ್ಟಿದ ಕೂಡಲೇ ಎದ್ದು ತಮ್ಮ ಕಾಲ ಮೇಲೆ ತಾವೇ ನಿಲ್ಲುತ್ತವೆ ಎಂದಿತು.

ಈ ರೀತಿ ಗೋವು ಮಹಿಳೆಗೆ ಕೊಟ್ಟ ಶಾಪದಿಂದಾಗಿ ಮನುಷ್ಯರಿಗೆ ಹುಟ್ಟಿದ ಮಕ್ಕಳು ಎದ್ದು ನಿಲ್ಲಲು 8-10 ತಿಂಗಳು ಬೇಕಾಗುತ್ತದೆ. ಪ್ರಾಣಿಗಳಿಗೆ ಹುಟ್ಟಿದ ಮರಿ-ಕರುಗಳು, ಕೆಲವೇ ಸಮಯದಲ್ಲಿ ಎದ್ದು ನಿಂತು ಓಡಾಡುತ್ತವೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನೆ? ಎನ್ನುವಂತೆ, ತಾನು ಸೃಷ್ಟಿಸಿದ ಜೀವಗಳನ್ನು ಭಗವಂತ ತಾನೇ ರಕ್ಷಿಸುತ್ತಾನೆ...

**- ರೂಪಾ** ಗುರುರಾಜ್



# ಜಿಲ್ಲೆಯ ಸ್ಥಳೀಯ ಸಂಸ್ಥೆಗಳು ಆಡಳಿತಾಧಿಕಾರಿ ಕೈವಶ

**ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಾವಧಿ ಮುಕ್ತಾಯ | ಅವಧಿ ವಿಸ್ತರಣೆಗೆ ಕೋರ್ಟ್ ಮೆಟ್ಟಿಲೇರಿದ ಚುನಾಯಿತ ಪ್ರತಿನಿಧಿಗಳು**

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು ಮಾತ್ರವಲ್ಲದೇ ಇದೀಗ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಆಡಳಿತಾಧಿಕಾರಿಗಳ ಕೈವಶವಾಗಿವೆ.

ಅ.28ಕ್ಕೆ ಹಾಸನ ಮಹಾನಗರ ಪಾಲಿಕೆ ಚುನಾಯಿತ ಸದಸ್ಯರ ಅಧಿಕಾರವಾಧಿ ಮುಕ್ತಾಯ ಗೊಂಡಿದೆ. ಆಡಳಿತಾಧಿಕಾರಿ ನೇಮಕ ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿ ರುವ ಸದಸ್ಯರು, ಅಧಿಕಾರಾವಧಿ ವಿಸ್ತರಣೆ ಮಾಡುವಂತೆ ನ್ಯಾಯಾಲಯದ ಮೆಟ್ಟಿಲೇ ರಿದ್ದು, ಮಂಗಳವಾರ ವಿಚಾರಣೆ ನಡೆಯಲಿದೆ.

ಅ.30ಕ್ಕೆ ಅರಸೀಕೆರೆ ನಗರಸಭೆ ಅವಧಿ ಮುಕ್ತಾಯಗೊಂಡು ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ನ.3ರಂದು ಸಕಲೇಶ ಪುರ ಪುರಸಭೆ ಅವಧಿ ಮುಕ್ತಾಯಗೊಂಡು ಈಗಾಗಲೇ ತಹಶೀಲ್ದಾರ್ ಅವರನ್ನು ಆಡಳಿತಾಧಿ ಕಾರಿಯಾಗಿ ನಿಯೋಜಿಸಲಾಗಿದೆ. ಆಲೂರು ಪುರಸಭೆ ಅವಧಿ ನ.5ಕ್ಕೆ ಮುಕ್ತಾಯಗೊಂಡು ಆಡಳಿತಾಧಿಕಾರಿ ನಿಯೋಜಿಸಲಾಗಿದೆ.

ನ.8ಕ್ಕೆ ಚನ್ನರಾಯಪಟ್ಟಣ, ಹೊಳೆನರಸೀಪುರ ಪುರಸಭೆ ಅವಧಿಯು ಮುಕ್ತಾಯಗೊಂಡಿದ್ದು, ಆಡಳಿತಾಧಿಕಾರಿ ನೇಮಕಕ್ಕೆ ವಿರೋಧ ವ್ಯಕ್ತಪಡಿಸಿ ಕೋರ್ಟ್ ಮೆಟ್ಟಿಲೇರಿದ್ದಾರೆ. ಅರಕಲಗೂಡು ಪಟ್ಟಣ ಪಂಚಾಯಿತಿ ಅವಧಿ ನ.5ಕ್ಕೆ ಮುಕ್ತಾಯಗೊಂಡಿದೆ. ಬೇಲೂರು ಪುರಸಭೆ ಒಂದರಲ್ಲಿ ಮಾತ್ರ ಚುನಾಯಿತ ಪ್ರತಿನಿಧಿ ಆಡಳಿತ ನಡೆಸುತ್ತಿದ್ದಾರೆ.

**ಅಧಿಕಾರಿಗಳ ದರ್ಬಾರ್**

ಶೀಘ್ರವೇ ಚುನಾವಣೆ ಘೋಷಣೆಯಾಗದಿದ್ದರೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿಗಳಲ್ಲಿ ಕಳೆದ ನಾಲ್ಕುವರೆ ವರ್ಷದಿಂದ ನಡೆಯುತ್ತಿರುವ ಆಡಳಿತಾಧಿಕಾರಿ ದರ್ಬಾರ್, ಪಾಲಿಕೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲೂ ಮುಂದುವರೆಯಲಿದೆ. ಸದ್ಯದಲ್ಲೇ ಗ್ರಾಮ ಪಂಚಾ ಯಿತಿ ಸದಸ್ಯರ ಅಧಿಕಾರ ಮುಕ್ತಾಯಗೊಳ್ಳಲಿದೆ. ಅಲ್ಲಿಗೂ ಆಡಳಿತಾಧಿಕಾರಿ ನೇಮಕ ಮಾಡಿದರೆ, ಶಾಸಕರು, ಸಂಸದರು ಹೊರತಾಗಿ ಉಳಿದೆಲ್ಲ ಸ್ಥಳೀಯ ಸಂಸ್ಥೆಗಳು ಅಧಿಕಾರಿಗಳ ಕೈವಶವಾಗಲಿವೆ.




**ರಾಜ್ಯಪಾಲರ ಆಜ್ಞಾನುಸಾರ ಆದೇಶ**

ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಚುನಾಯಿತ ಸದಸ್ಯರ ಅವಧಿ ಮುಕ್ತಾಯಗೊಂಡ ಹಿನ್ನಲೆ ಆಡಳಿತಾತ್ಮಕ ಹಿತ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಆಡಳಿತಾಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸಿದೆ. ಈ ಕುರಿತು ರಾಜ್ಯಪಾಲರ ಆಜ್ಞಾನು ಸಾರ ರಾಜ್ಯ ಸರ್ಕಾರವು ವಿಶೇಷ ರಾಜ್ಯ ಪತ್ರಿಕೆಯಲ್ಲಿ ಅಧಿಸೂಚನೆಯನ್ನು ಪ್ರಕಟಿಸಿದೆ. ಕೋರ್ಟ್ ಮೆಟ್ಟಿಲೇರಿರುವ ಹಾಸನ, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು ಹೊರತು ಪಡಿಸಿ ಅರಸೀಕೆರೆ ನಗರಸಭೆ, ಸಕಲೇಶಪುರ ಪುರಸಭೆ ಮತ್ತು ಆಲೂರು ಪಟ್ಟಣ ಪಂಚಾಯಿತಿ ಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

(ಮುಕ್ತಾಯಗೊಂಡ ಜಿಲ್ಲೆಯ ಸ್ಥಳೀಯ ಸಂಸ್ಥೆಗಳು)

| ಸ್ಥಳೀಯ ಸಂಸ್ಥೆ | ಅವಧಿ ಮುಕ್ತಾಯ | ಆಡಳಿತಾಧಿಕಾರಿ |
|---|---|---|
| ಅರಸೀಕೆರೆ ನಗರಸಭೆ | ಅ.31 | ಜಿಲ್ಲಾಧಿಕಾರಿ |
| ಸಕಲೇಶಪುರ ಪುರಸಭೆ | ನ.4 | ಉಪವಿಭಾಗಾಧಿಕಾರಿ |
| ಆಲೂರು ಪಟ್ಟಣ ಪಂಚಾಯಿತಿ | ನ.6 | ತಹಶೀಲ್ದಾರ್ |
| ಹಾಸನ ಮಹಾನಗರ ಪಾಲಿಕೆ | ಅ.28 | ---- |
| ಅರಕಲಗೂಡು ಪಟ್ಟಣ ಪಂಚಾಯಿತಿ | ನ.3 | --- - |
| ಚನ್ನರಾಯಪಟ್ಟಣ ಪುರಸಭೆ | ನ.8 | ---- |
| ಹೊಳೆನರಸೀಪುರ ಪುರಸಭೆ | ನ.8 | ---- |




ಈ ಆದೇಶವು ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 389ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊರಡಿಸಲಾಗಿದ್ದು, ಹೊಸ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬರುವವರೆಗೆ ಈ ಆಡಳಿತಾಧಿಕಾರಿಗಳು ನಗರ, ಸ್ಥಳೀಯ ಸಂಸ್ಥೆಗಳ ದಿನನಿತ್ಯದ ಕಾರ್ಯ ನಿರ್ವಹಣೆ ಮತ್ತು ಆಡಳಿತವನ್ನು ಮುಂದುವರಿಸಲಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅವಧಿಯು ಮುಕ್ತಾಯವಾಗುತ್ತಿರುವ ಈ ಸಂದರ್ಭದಲ್ಲಿ, ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 18 ಮತ್ತು ಸಂವಿಧಾನದ ಆರ್ಟಿಕಲ್ 243-ಯುರ ಪ್ರಕಾರ ಚುನಾಯಿತ ಮಂಡಳಿಯ ಅವಧಿಯು ಅದರ ಮೊದಲ ಸಭೆ ನಡೆದ ದಿನಾಂಕದಿಂದ ಐದು ವರ್ಷಗಳ ಕಾಲ ಇರುತ್ತದೆ. ಆ ಅವಧಿ ಮುಕ್ತಾಯಗೊಂಡ ಹಿನ್ನಲೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ.

ಈ ಹಿಂದೆ, 9ನೇ ಮತ್ತು 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೀಸಲಾತಿ ನಿಗದಿ ಪಡಿಸುವ ಸಂಬಂಧ ಹಲವು ರಿಟ್ ಅರ್ಜಿಗಳು ಮತ್ತು ರಿಟ್ ಅಪೀಲುಗಳು ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಛ ನ್ಯಾಯಾಲಯದ ಮುಂದೆ ಬಾಕಿ ಇದ್ದವು. ನ್ಯಾಯಾಲಯದ ಪ್ರಕ್ರಿಯೆಗಳಿಂದಾಗಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನ ಗಳಿಗೆ ಮೀಸಲಾತಿ ನಿಗದಿಪಡಿಸಲು ವಿಳಂಬವಾ ಯಿತು. ಈ ವಿಳಂಬದ ಅವಧಿಯಲ್ಲಿ ಆಡಳಿತಾ ತ್ಮಕ ಹಿತದೃಷ್ಟಿಯಿಂದ, ಕರ್ನಾಟಕ ಪುರಸಭೆಗಳ ಕಾಯ್ದೆ, 1964 ರ ಕಲಂ-315 ರನ್ವಯ ಹಲವು ನಗರ ಸ್ಥಳೀಯ ಸಂಸ್ಥೆಗಳಿಗೆ ಆಡಳಿತಾಧಿ ಕಾರಿಗಳನ್ನು ನೇಮಿಸಲಾಗಿತ್ತು.

## ತಕ್ಷಣ ಕ್ರಮಕ್ಕೆ ಆಟೋ ಚಾಲಕರ ಒತ್ತಾಯ

# ಓಲಾ, ಊಬರ್, ರಾಪಿಡೋ ವಿರುದ್ಧ ಪ್ರತಿಭಟನೆ




• ಪ್ರಜೋದಯ ವರದಿ

**ಹಾಸನ:** ಓಲಾ, ಊಬರ್, ರಾಪಿಡೋ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಆಟೋ ಚಾಲಕರು ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಹೇಮಾವತಿ ಪ್ರತಿಮೆ ಮುಂಭಾಗದಿಂದ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿ ಆವರಣಕ್ಕೆ ಆಗಮಿಸಿದ ಪ್ರತಿಭಟನಾಕಾರರು, ಆ್ಯಪ್ ಕಂಪನಿಗಳ ದೌರ್ಜನ್ಯದಿಂದ ಬದುಕು ಕಷ್ಟವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ರಾಜ್ಯ ಆಟೋ ಚಾಲಕರ ಮಜ್ದೂರ್ ಸಂಘದ ಉಪಾಧ್ಯಕ್ಷ ಹೆಚ್.ಕೆ.ದಿಲೀಪ್ ಅವರು, ಜಿಲ್ಲೆಯ ಸಾವಿರಾರು ಆಟೋ ಚಾಲಕರು ತಮ್ಮ ಕುಟುಂಬದ ಜೀವನೋಪಾಯವನ್ನು ಆಟೋ ಚಾಲನೆ ಮೂಲಕ ಮಾಡುತ್ತಿದ್ದಾರೆ. ಸರ್ಕಾರದಿಂದ ಯಾವುದೇ ಸೌಲಭ್ಯವಿಲ್ಲದೆ, ದಿನನಿತ್ಯದ ಪ್ರಯಾಣಿಕರ ಭರವಸೆ ಮೇಲೆ ಬದುಕು ನಡೆಸುತ್ತಿರುವ ಈ ವರ್ಗ, ಈಗ ಖಾಸಗಿ ಅಗ್ರಿಗೇಟರ್ ಕಂಪನಿಗಳ ದೌರ್ಜನ್ಯದಿಂದ ನಲುಗಿದೆ ಎಂದು ಹೇಳಿದರು.

ನಾವು ಅಸಂಘಟಿತ ಕಾರ್ಮಿಕ ವರ್ಗಕ್ಕೆ ಸೇರಿದ್ದೇವೆ. ಸರ್ಕಾರಿ ಅಥವಾ ಖಾಸಗಿ ಉದ್ಯೋಗ ಸಿಕ್ಕಿಲ್ಲದ ಕಾರಣದಿಂದ ಜೀವನೋಪಾಯಕ್ಕಾಗಿ ಆಟೋ ಚಾಲನೆ ಆರಂಭಿಸಿದ್ದೇವೆ. ಆದರೆ, ಈಗ ಓಲಾ, ಊಬರ್, ರಾಪಿಡೋ ಮುಂತಾದ ಆ್ಯಪ್ ಕಂಪನಿಗಳು ನಮ್ಮ ದುಡಿಮೆಗೆ ಕುತ್ತು ತಂದಿವೆ. ಆ್ಯಪ್ ಕಂಪನಿಗಳ ಅಕ್ರಮ ಸೇವೆಯಿಂದ ಆದಾಯ ಕುಸಿತವಾ ಗಿದೆ. ಇತ್ತೀಚಿನ ದಿನಗಳಲ್ಲಿ ಈ ಅಗ್ರಿಗೇಟರ್ ಕಂಪನಿಗಳು ಆನ್‌ಲೈನ್ ಆ್ಯಪ್ ಮೂಲಕ ಆಟೋ ಹಾಗೂ ಬೈಕ್ ಟ್ಯಾಕ್ಸಿ ಸೇವೆಗಳನ್ನು ನಡೆಸುತ್ತಿದ್ದು, ಸ್ಥಳೀಯ ಆಟೋ ಚಾಲಕರ ಆದಾಯ ಭಾರೀ ಪ್ರಮಾಣದಲ್ಲಿ ಕುಸಿದಿದೆ ಎಂದು ತಿಳಿಸಿದರು.

ಪ್ರತಿದಿನದ ಇಂಧನ ಖರ್ಚು, ವಾಹನ ಸಾಲದ ಬಾಧೆ, ಮಕ್ಕಳ ಶಿಕ್ಷಣ ವೆಚ್ಚ ಇವೆಲ್ಲವನ್ನು ಪೂರೈಸಲಾಗದೆ, ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೈಕೋರ್ಟ್ ಹಾಗು ರಾಜ್ಯ ಸರ್ಕಾರ ಈ ರೀತಿಯ ಖಾಸಗಿ ಸಂಸ್ಥೆಗಳ ಸೇವೆ ನಿಷೇಧಿಸುವಂತೆ ಆದೇಶ ನೀಡಿದ್ದರೂ ಸಹ, ಓಲಾ, ಊಬರ್, ರಾಪಿಡೋ ಮುಂತಾದ ಕಂಪನಿಗಳು ಮಧ್ಯವರ್ತಿಗಳಂತೆ ಕಾರ್ಯನಿರ್ವಹಿಸುತ್ತಿವೆ. ಚಾಲಕರಿಗೆ ಹಣದ ಆಮಿಷ ತೋರಿಸಿ ಆ್ಯಪ್ ಡೌನ್‌ಲೋಡ್ ಮಾಡಿಸಿ, ಸಾರ್ವಜ ನಿಕರ ನಡುವೆ ವೈಮನಸ್ಯ ಉಂಟು ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು.

ಈ ವಿಷಯವಾಗಿ ಹಿಂದೆಯೂ ಎರಡು ಬಾರಿ ಜಿಲ್ಲಾಡಳಿತಕ್ಕೆ ಹಾಗು ಸಾರಿಗೆ ಇಲಾಖೆಗೆ ಮನವಿ ಸಲ್ಲಿಸಿದ್ದರೂ, ಕ್ರಮ ಕೈಗೊಂಡಿಲ್ಲ. ಇನ್ನಾದರೂ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಆ್ಯಪ್ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಉಂಟಾಗಬಹುದೆಂದು ಆಗ್ರಹಿಸಿದರು.

ಸರ್ಕಾರ ಮತ್ತು ಜಿಲ್ಲಾಡಳಿತ ನಮ್ಮ ಕಷ್ಟ ಅರ್ಥಮಾಡಿಕೊಂಡು ಸ್ಥಳೀಯ ಆಟೋ ಚಾಲಕರ ಹಕ್ಕು ಹಾಗು ಗೌರವ ಕಾಪಾಡಬೇಕೆಂದು ಮನವಿ ಮಾಡಿದರು. ಇದೇ ವೇಳೆ ಪ್ರತಿಭಟನೆಗೆ ಬಾರದೆ ಓಡುತ್ತಿದ್ದ ಆಟೋಗಳನ್ನು ಪ್ರತಿಭಟನಾಕಾರರು ತಡೆದಾಗ ಸಣ್ಣ ಗೊಂದಲ ಉಂಟಾಯಿತು. ಪೊಲೀಸರು ಮಧ್ಯೆ ಪ್ರವೇಶಿಸಿ ಸಮಾಧಾನ ಪಡಿಸಿದರು.

ಸಂಘದ ಜಿಲ್ಲಾಧ್ಯಕ್ಷ ಜಾನ್, ಉಪಾಧ್ಯಕ್ಷ ಎನ್.ಕುಮಾರ್, ಎಂ. ಆನಂದ್, ಪ್ರಧಾನ ಕಾರ್ಯದರ್ಶಿ ಎಂ.ಸಿ.ಯಶ್ವಂತ್, ಕಾರ್ಯದರ್ಶಿ ರಮೇಶ್, ಸಹ ಕಾರ್ಯದರ್ಶಿ ಪವನ್, ಶಾಖಾ ಪದಾಧಿಕಾರಿ ರವಿ, ಸಂಚಾಲಕ ಹರೀಶ್, ಸಹ ಸಂಚಾಲಕ ಮಂಜು, ನಿರ್ದೇಶಕ ಹೆಚ್.ಕೆ.ಪ್ರದೀಪ್, ಖಜಾಂಚಿ ಕೆ.ಆರ್. ಶಮಂತ್, ಮೋಹನ್ ಕುಮಾರ್ ಇತರರಿದ್ದರು.

## ಬಸ್ ಹತ್ತುವಾಗ ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಬಸ್ ಹತ್ತುವಾಗ ಉಂಟಾದ ನೂಕು ನುಗ್ಗಲಿನಲ್ಲಿ ಮಹಿಳೆಯ ಕೊರಳಿನಿಂದ 60 ಗ್ರಾಂ ತೂಕದ ಚಿನ್ನದ ಸರ ಎಗರಿಸಿರುವ ಘಟನೆ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಉಲಿವಾಲ ಗ್ರಾಮದ ಸಾವಿತ್ರಮ್ಮ ಎಂಬುವವರು ನ.9 ರಂದು ಚನ್ನರಾಯಪಟ್ಟಣದಿಂದ ಹೊಳೆನರಸೀಪುರಕ್ಕೆ ಹೋಗಲು ಬಸ್ ಹತ್ತುತ್ತಿದ್ದಾಗ ಅವರ ಗಮನಕ್ಕೆ ಬಾರದಂತೆ 4 ಲಕ್ಷ ರೂ. ಬೆಲೆಯ ಸರ ಎಗರಿಸಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇಂದು ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ

• **ಪ್ರಜೋದಯ ವರದಿ**

**ಹಾಸನ:** ನಗರದ ಸಾಲಗಾಮೆ ರಸ್ತೆಯಲ್ಲಿರುವ ಸೆಂಟ್ರಲ್ ಕಾಮರ್ಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ನ.11ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಕನ್ನಡ ರಾಜ್ಯೋತ್ಸವ ಹಮ್ಮಿಕೊಳ್ಳಲಾಗಿದೆ.

ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಮಹಾನಗರ ಪಾಲಿಕೆ ಮೇಯರ್ ಗಿರೀಶ್ ಚನ್ನವೀರಪ್ಪ ಉದ್ಘಾಟನೆ ನೆರವೇರಿಸುವರು. ಸಾಹಿತಿ ಡಾ.ಸೀ.ಚ.ಯತೀಶ್ವರ್ ಅವರು ರಾಜ್ಯೋತ್ಸವ ಭಾಷಣ ಮಾಡಲಿದ್ದಾರೆ. ವೇದಿಕೆ ಕಾರ್ಯಕ್ರಮದ ಬಳಿಕ ಬೆಳಿಗ್ಗೆ 11 ಗಂಟೆಗೆ ವೀರಗಾಸೆ, ಯಕ್ಷಗಾನ, ಪೂಜಾ ಕುಣಿತ, ಹುಲಿ ಕುಣಿತ, ಕೊಡಗು ನೃತ್ಯ ಮೆರವಣಿಗೆ ನಡೆಯಲಿದೆಯೆಂದು ಪ್ರಕಟಣೆ ತಿಳಿಸಿದೆ.

# ಸುಳ್ಳು ಹೇಳಿಕೆಗಳಿಂದ ಜನರ ದಾರಿ ತಪ್ಪಿಸುವ ಕೆಲಸ

» **ಮೊದಲನೇ ಪುಟದಿಂದ**

ಗಳನ್ನು ನೇರವಾಗಿ ಸಂಪರ್ಕಿಸಿ ಸಚಿವರಿಂದ ಅವರಿಗೆ ಅನುಮೋದನೆ ಕೊಡಿಸಿರುವವರು ಯಾರೆಂದು ಸತ್ಯ ಗೊತ್ತಾಗಬೇಕು. ಸುಳ್ಳು ಮಾಹಿತಿ ನೀಡಿ ದಿಕ್ಕು ತಪ್ಪಿಸುತ್ತಿರುವವರ ಬಗ್ಗೆ ಮಾಹಿತಿ ನೀಡಬೇಕೆಂದರು.

ಶಾಸಕರ ಈ ಮಾತಿಗೆ ಕೆಂಡಾ ಮಂಡಲರಾದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಆನಂದ್, ಕೆಡಿಪಿ ಸದಸ್ಯರಾದ ಚೇತನ್, ನಂದೀಶ್, ಜ್ಯೋತಿ, ನವೀನ್, ಪರಮೇಶ್, ಸುಹೀಲ್ ಪಾಷ ಅವರು, 40 ವರ್ಷಗಳ ರಾಜಕೀಯವನ್ನೇ ಉಸಿರಾಡುತ್ತಿರುವ ಬಿ.ಶಿವರಾಮ್ ಅವರ ಕುರಿತು ಹಗುರ ವಾಗಿ ಮಾತನಾಡುವುದು ತರವಲ್ಲ. ಇತ್ತೀಚಿನ ದಿನಗಳಲ್ಲಿ ಕ್ಷೇತ್ರದಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಅಧಿಕಾರಿಗಳನ್ನು ಹೆದರಿಸುವ ಕೆಲಸ ನಡೆಯುತ್ತಿದೆ. ಶಾಸಕರ ಹಿಂಬಾಲಕರು ಸರ್ವಾಧಿಕಾರಿಗಳಂತೆ ವರ್ತಿಸುತ್ತಿದ್ದಾರೆ. ಕಳಪೆ ಕಾಮಗಾರಿ ವಿಪರೀತವಾಗಿವೆ ಎಂದರು.

ಮಹಾತ್ಮ ಗಾಂಧೀಜಿ ಅವರನ್ನು ಹತ್ಯೆಗೈದ ಗೋಡ್ಸೆಯನ್ನು ಪೂಜಿಸುವ ನಿಮ್ಮಿಂದ ನಾವು ಸಂಸ್ಕೃತಿ ಕಲಿಯುವ ಅವಶ್ಯಕತೆ ಇಲ್ಲವೆಂದು ಗುಡುಗಿದರು.

ಕೆರಳಿದ ಶಾಸಕ ಸುರೇಶ್ ಅವರು, ಇಡೀ ರಾಜ್ಯ ಹಾಗು ತಾಲ್ಲೂಕಿಗೆ ನಿಮ್ಮ ನಾಯಕರ ಸಾಧನೆ ಏನೆಂಬುದು ಗೊತ್ತಿದೆ. ವರ್ಗಾವಣೆ ದಂಧೆಯಿಂದ ಪ್ರತಿಯೊಂದಕ್ಕೂ ಲಂಚ ಪಡೆದು ದೌರ್ಜನ್ಯ ದಬ್ಬಾಳಿಕೆ ಮಾಡುತ್ತಿರುವುದು ಯಾರು. ಇಲ್ಲಿ ಭ್ರಷ್ಟಾಚಾರ ರಹಿತವಾಗಿ ಉತ್ತಮ ಸಾರ್ವಜನಿಕ ಕೆಲಸ ಮಾಡುವವರನ್ನು ನಾನು ಸ್ವಾಗತಿಸುತ್ತೇನೆ. ಭ್ರಷ್ಟಾಚಾರಿಗಳಿಗೆ ನಮ್ಮ ತಾಲ್ಲೂಕಿನಲ್ಲಿ ಅವಕಾಶವಿಲ್ಲ. ಯಾವ ಕೆಲಸ ಹೇಗೆ ಮಾಡಬೇಕೆಂಬ ಅರಿವು ನನಗಿದೆ. ರಾಜ್ಯದಲ್ಲಿ ರಾಷ್ಟ್ರಪತಿ ಹಾಗು ರಾಜ್ಯಪಾಲರ ಆಳ್ವಿಕೆ ಇಲ್ಲ. ಇಲ್ಲಿ ಒಬ್ಬರೇ ಮುಖ್ಯಮಂತ್ರಿ ಹಾಗು ಸಚಿವರಿದ್ದಾರೆ. ನಾನು ಅವರ ಬಳಿ ಹೋಗದೆ ನೇರವಾಗಿ ಅಧಿಕಾರಿಗಳ ಬಳಿ ಕೆಲಸ ತರುತ್ತೇನೆಂದು ಹೇಳುವವರಿಗೆ ನಾಚಿಕೆಯಾಗಬೇಕು. ಯಾವ ಯಾವ ಕಾಮ ಗಾರಿಗಳಲ್ಲಿ ನೀವು ಎಷ್ಟೆಷ್ಟು ಲಂಚ ಪಡೆದಿದ್ದೀರಿ ಎಂದು ನನ್ನಲ್ಲಿ ದಾಖಲೆ ಗಳಿವೆ. ನಾನಾಗಲಿ ಅಥವಾ ಇಲ್ಲಿರುವ ಯಾರೇ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದರೆ ತಿಳಿಸಿ ಅವರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡುತ್ತೇನೆ. ಇಲ್ಲಿ ಕೂಗಾಡಿದರೆ ನಾನು ಜಗ್ಗುವ ಮಗನಲ್ಲ. ಕ್ಷೇತ್ರದ ಸೇವಕನಾಗಿ ಭ್ರಷ್ಟಾಚಾರ ರಹಿತವಾಗಿ ಕೆಲಸ ಮಾಡುತ್ತಿರುವುದು ಇಡೀ ತಾಲ್ಲೂಕಿಗೆ ತಿಳಿದಿದೆ. ನಿಮ್ಮಿಂದ ಹೇಳಿಸಿಕೊಳ್ಳುವ ಅಗತ್ಯವಿಲ್ಲವೆಂದರು.

ತಹಶೀಲ್ದಾರ್ ಶ್ರೀಧರ್ ಕಂಕನವಾಡಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸತೀಶ್ ಕುಮಾರ್, ಆಡಳಿತಾಧಿಕಾರಿ ರಮೇಶ್, ವೃತ್ತ ನಿರೀಕ್ಷಕ ರೇವಣ್ಣ ಹಾಜರಿದ್ದರು.

## ಪಶು ವೈದ್ಯರ ನೇಮಕಕ್ಕೆ ಸರ್ಕಾರ ನಿರಾಸಕ್ತಿ



• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನಲ್ಲಿ ಪಶು ಸಂಗೋಪನಾ ಮತ್ತು ವೈದ್ಯಕೀಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಶಾಸಕ ಸಿಮೆಂಟ್ ಮಂಜು ಅವರು ಆಗ್ರಹಿಸಿದರು.

ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನೂತನ ಪಶು ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಸುಮಾರು 31 ಸಾವಿರಕ್ಕೂ ಹೆಚ್ಚು ಜಾನುವಾರುಗಳಿದ್ದು, 16 ಪ್ರಾಥಮಿಕ ಪಶು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ, ಅಗತ್ಯಕ್ಕೆ ತಕ್ಕಂತೆ ಪಶುವೈದ್ಯರು, ಸಹಾಯಕರು ಹಾಗು ಗ್ರೂಪ್-ಡಿ ನೌಕರರ ಕೊರತೆ ತೀವ್ರವಾಗಿದೆ. ಈ ಹಿಂದೆ ಹಲವು ಬಾರಿ ಪಶುಸಂಗೋಪನಾ ಸಚಿವರಿಗೆ ಮನವಿ ಸಲ್ಲಿಸಿದ್ದೇನೆ. ಆದರೂ ಸರ್ಕಾರ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ನಿರಾಸಕ್ತಿ ತೋರಿಸುತ್ತಿರುವುದು ಬೇಸರದ ವಿಚಾರವೆಂದು ವಿಷಾದ ವ್ಯಕ್ತಪಡಿಸಿದರು.

ಜಾನುವಾರುಗಳಿಗೆ ಅಗತ್ಯವಿರುವ ಲಸಿಕೆಗಳನ್ನು ನಿಯಮಿತವಾಗಿ ಹಾಕಿಸುವುದರಿಂದ ರೋಗಗಳನ್ನು ತಡೆಗಟ್ಟಬಹುದು ಮತ್ತು ಹರಡದಂತೆ ತಡೆಯಬಹುದು. ಜಾನುವಾರುಗಳ ಆರೋಗ್ಯ ಕಾಪಾಡುವುದು ರೈತರ ಆರ್ಥಿಕ ಸ್ಥಿರತೆಗೆ ಸಹಾಯಕ ಎಂದರು.

ತಾಲ್ಲೂಕು ಪಶು ವೈದ್ಯಾಧಿಕಾರಿ ವೆಂಕಟೇಶ್, ಹೊಸೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ, ಸದಸ್ಯರು, ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಪ್ರವಾಸೋದ್ಯಮದ ಅಭಿವೃದ್ಧಿ-ಪರಿಸರ ಸಂರಕ್ಷಣೆಗೆ ವಿಶೇಷ ಗಮನ

• ಪ್ರಜೋದಯ ವರದಿ




**ಸಕಲೇಶಪುರ:** ತಾಲ್ಲೂಕಿನ ಹೋಂ ಸ್ಟೇಗಳು ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಮೇಲೂ ವಿಶೇಷ ಗಮನ ಹರಿಸುತ್ತಿವೆ ಎಂದು ಹೋಂ ಸ್ಟೇ ಮಾಲೀಕರ ಸಂಘದ ಅಧ್ಯಕ್ಷ ಮಾಲ್ಮನೆ ಪುರುಷೋತ್ತಮ್ ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು ಒಂಬತ್ತು ವರ್ಷಗಳ ಹಿಂದೆ ಹೋಂ ಸ್ಟೇ ಮಾಲೀಕರ ಸಂಘವು ಸ್ಥಾಪನೆಯಾಗಿ, ಸಕಲೇಶಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಹೋಂ ಸ್ಟೇ ಮಾಲೀಕರಿಗೆ ಒಂದು ಸಮೂಹ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಹೊಸ ಕಾರ್ಯಕಾರಿ ಸಮಿತಿ ರಚನೆಯಾಗಿದ್ದು, ಅದರಲ್ಲಿ ತಾವು ಅಧ್ಯಕ್ಷರಾಗಿ, ಉಪಾಧ್ಯಕ್ಷ, ಕಾರ್ಯದರ್ಶಿ ಹಾಗೂ ಖಜಾಂಚಿ ಸೇರಿ ಒಟ್ಟು 14 ಸದಸ್ಯರ ಸಮಿತಿಯು ಕಾರ್ಯನಿರ್ವಹಿಸಲಿದ್ದು, ಸಂಘದ ಚಟುವಟಿಕೆಗಳನ್ನು ಹೆಚ್ಚು ಬಲಪಡಿಸಲು ಉತ್ಸಾಹದಿಂದ ಮುಂದಾಗಿದೆ ಎಂದರು.

ಪ್ರತಿ ವರ್ಷ ಸಂಘದ ವತಿಯಿಂದ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳಲ್ಲಿ ಸ್ವಚ್ಛತಾ ಕಾರ್ಯ ಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ಕೆ ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಪಡೆಯದೆ, ಸಂಘದ ಸದಸ್ಯರ ಸಹಕಾರದಿಂದಲೇ ಈ ಚಟುವಟಿಕೆಗಳು ನಡೆಯುತ್ತಿವೆ. ಪ್ಲಾಸ್ಟಿಕ್ ಮಾಲಿನ್ಯ ತಡೆಗಟ್ಟುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಹೋಂ ಸ್ಟೇ ಮಾಲೀಕರ ಸಂಘದಿಂದ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ತಿಳಿಸಿದರು.

ಮಲೆನಾಡಿನ ನೈಸರ್ಗಿಕ ಸೌಂದರ್ಯ, ತೋಟಗಾರಿಕೆ, ಸಾಂಪ್ರದಾಯಿಕ ಆಹಾರ ಪದ್ಧತಿ ಮತ್ತು ಸ್ಥಳೀಯ ಸಂಸ್ಕೃತಿಯನ್ನು ಪ್ರವಾಸಿಗರಿಗೆ ಪರಿಚಯಿಸುವುದು ನಮ್ಮ ಉದ್ದೇಶ. ಸರ್ಕಾರದಿಂದ ಪ್ರವಾಸೋದ್ಯಮ ಇಲಾಖೆಯ ಸಹಕಾರ ಸಿಗುತ್ತಿಲ್ಲ. ಸಕಲೇಶಪುರ ತಾಲ್ಲೂಕಿನ ಲ್ಲಿನ ಹತ್ತಾರು ಸುಂದರ ತಾಣಗಳಿಗೆ ಸೂಕ್ತ ರಸ್ತೆ, ಸೌಕರ್ಯ ಹಾಗೂ ಶೌಚಾಲಯ ಕೊರತೆ ಯಿಂದ ಪ್ರವಾಸಿಗರು ತೊಂದರೆ ಅನುಭವಿಸುತ್ತಿದ್ದಾರೆಂದು ಅವರು ವಿಷಾದ ವ್ಯಕ್ತಪಡಿಸಿದರು.

ಹೋಂ ಸ್ಟೇ ಮಾಲೀಕರ ಸಂಘದ ಕಾರ್ಯದರ್ಶಿ ಪ್ರಸನ್ನ ಅವರು ಮಾತನಾಡಿ, ಮಾಲೀಕರ ಸಂಘವು ಕಳೆದ ಹಲವು ವರ್ಷಗಳಿಂದ ಅತ್ಯಂತ ಅಚ್ಚುಕಟ್ಟಾಗಿ, ಯಾವುದೇ ತಪ್ಪು-ಚೂಕಿಲ್ಲದೆ ಕಾರ್ಯನಿರ್ವಹಿಸುತ್ತಿದೆ. ಸಂಘದ ಉದ್ದೇಶ ಕೇವಲ ಹೋಂ ಸ್ಟೇಗಳ ಬೆಳವಣಿಗೆಗೆ ಸೀಮಿತವಾ ಗದೆ, ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದಾಗಿದೆ ಎಂದರು.

ಸಕಲೇಶಪುರದ ಹೋಂ ಸ್ಟೇ ಮಾಲೀಕರು ಹಾಗೂ ಸ್ಥಳೀಯರು ಕೈಜೋಡಿಸಿ ಸ್ವಚ್ಛತಾ ಕಾರ್ಯವನ್ನು ಆದ್ಯತೆಯಾಗಿ ಕೈಗೊಳ್ಳಬೇಕು. ಸಕಲೇಶಪುರದ ನೈಸರ್ಗಿಕ ಸೌಂದರ್ಯವನ್ನು ಅನುಭವಿಸಲು ಬರುವ ಪ್ರವಾಸಿಗರಿಗೆ ಉತ್ತಮ ಗುಣಮಟ್ಟದ ವಸತಿ, ಆಹಾರ ಮತ್ತು ಆತಿಥ್ಯ ಒದಗಿಸುವ ಮೂಲಕ ಸಕಲೇಶಪುರದ ಖ್ಯಾತಿಯನ್ನು ಮತ್ತಷ್ಟು ಎತ್ತರಕ್ಕೆ ಏರಿಸಬೇಕು. ನಮ್ಮ ಉದ್ದೇಶ ಸಕಲೇಶಪುರದ ಪ್ರವಾಸೋದ್ಯಮವನ್ನು ರಾಜ್ಯ ಮಟ್ಟದಿಂದ ರಾಷ್ಟ್ರಮಟ್ಟಕ್ಕೆ ತಲುಪಿಸುವುದಾಗಿದೆ ಎಂದು ಹೇಳಿದರು. ಪದಾಧಿಕಾರಿಗಳಾದ ವಿಕ್ರಂ, ಗೌತಮ್, ಯಶವಂತ್ ಉಪಸ್ಥಿತರಿದ್ದರು.

## ಹಾಸನದಲ್ಲಿ ಸಿಐಟಿಯು 16ನೇ ರಾಜ್ಯ ಸಮ್ಮೇಳನ

• ಪ್ರಜೋದಯ ವರದಿ



**ಅರಕಲಗೂಡು:** ದುಡಿಯುವ ಜನರ ಮುಂಚೂಣಿಯ ಸಂಘಟನೆಯಾದ ಸಿಐಟಿಯುನ 16ನೇ ರಾಜ್ಯ ಮಟ್ಟದ ಸಮ್ಮೇಳನವು ನ.13 ರಿಂದ 15ರ ವರೆಗೆ ಹಾಸನದಲ್ಲಿ ನಡೆಯಲಿದೆ ಎಂದು ಸಂಘಟನೆಯ ಜಿಲ್ಲಾ ಮುಖಂಡ ಲಿಂಗರಾಜ್ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ನಗರದ ಅಂಬೇಡ್ಕರ್ ಭವನದಲ್ಲಿ ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಕಾರ್ಮಿಕರ ಸಮಸ್ಯೆಗಳ ಕುರಿತಾದ ಹಲವು ವಿಷಯಗಳು ಚರ್ಚಿತವಾಗಲಿದೆ, ಮಾಸಿಕ 36 ಸಾವಿರ ರೂ. ಕನಿಷ್ಟ ವೇತನ, ರೂ. 10 ಸಾವಿರ ಪಿಂಚಣಿ, ಉದ್ಯೋಗ ಹಾಗೂ ಸಾಮಾಜಿಕ ಭದ್ರತೆಗಾಗಿ ಒತ್ತಾಯ, ಕರಾಳ ಕಾರ್ಮಿಕ ಸಂಹಿತೆಗಳಿಗೆ ವಿರೋಧ, ಸಮೃದ್ಧ ಹಾಗೂ ಸೌಹಾರ್ದ ಕರ್ನಾಟಕ ನಿರ್ಮಾಣದ ಉದ್ದೇಶವನ್ನು ಇಟ್ಟುಕೊಂಡು ಸಮ್ಮೇಳನ ಆಯೋಜಿಸಲಾಗಿದೆ ಎಂದರು.

ಜಿಲ್ಲೆಯ 8 ತಾಲ್ಲೂಕುಗಳಲ್ಲಿ ಸಿಐಟಿಯು ಸಂಘಟನೆ ಇದ್ದು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ನಿರಂತರವಾಗಿ ಕೆಲಸ ಮಾಡಲಾಗುತ್ತಿದೆ. ಅಂಗನವಾಡಿ, ಗ್ರಾಮ ಪಂಚಾಯಿತಿ, ಬಿಸಿಊಟ, ಹಾಸ್ಟೇಲ್ ನೌಕರರು, ಪ್ಲಾಂಟೇಷನ್, ಗುತ್ತಿಗೆ, ಹೊರಗುತ್ತಿಗೆ ನೌಕರರು ಸೇರಿ ವಿವಿಧ ಕಾರ್ಮಿಕರ ಸಂಘಗಳನ್ನು ರಚಿಸಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಲಾಗುತ್ತಿದೆ. ನವ ಉದಾರವಾದಿ ನೀತಿಗಳನ್ನು ತೀವ್ರವಾಗಿ ಜಾರಿಗೊಳಿಸುವ ಮೂಲಕ ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕು ಗೊಳಿಸಲಾಗುತ್ತಿದ್ದು, ಈ ಎಲ್ಲಾ ಸಮಸ್ಯೆಗಳ ಕುರಿತು ಸಮ್ಮೇಳನದಲ್ಲಿ ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಲಾಗುವುದು. ಸಮ್ಮೇಳನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ 450 ಪ್ರತಿನಿಧಿಗಳು ಭಾಗವಹಿಸುತ್ತಿದ್ದಾರೆ ಎಂದರು.

ಸಮ್ಮೇಳನದ ಕೊನೆಯ ದಿನವಾದ ನ.15ರ ಶನಿವಾರ 10 ಸಾವಿರ ಕಾರ್ಮಿಕರಿಂದ ಬೃಹತ್ ಮೆರವಣಿಗೆ ನಡೆಯಲಿದೆ. ಒಂದು ಸಾವಿರ ಕೆಂಪು ಸಮವಸ್ತ್ರ ಧಾರಿಗಳಿಂದ ಪಥಸಂಚಲನ ನಡೆಯಲಿದೆ. ತಾಲ್ಲೂಕಿನ ಎಲ್ಲಾ ಕಾರ್ಮಿಕ ವರ್ಗದವರು ಸಮ್ಮೇಳನದಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಅಶೋಕ್ ಅತ್ನಿ, ತಾಲ್ಲೂಕು ಅಧ್ಯಕ್ಷ ಜಿ.ಆರ್.ಚಂದ್ರು, ಮುಖಂಡರಾದ ಗೀತಾ, ಕೆ.ಎಸ್. ಮಂಜುನಾಥ್, ಸುಬ್ರಹ್ಮಣ್ಯ ಗೋಷ್ಠಿಯಲ್ಲಿದ್ದರು.

## ಆರ್‌ಎಸ್‌ಎಸ್ ವಿರುದ್ಧ ದಸಂಸ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಜನರನ್ನು ಧರ್ಮದ ಆಧಾರದ ಮೇಲೆ ದೇಶ ವಿಭಜನೆ ಮಾಡಲು ಕುತಂತ್ರ ಮಾಡುತ್ತಿರುವ ಆರ್‌ಎಸ್‌ಎಸ್ ವಿರುದ್ಧ ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಯಿತು.

ದೇಶದ ಸಾಮಾಜಿಕ ಏಕತೆಯನ್ನು ಧರ್ಮದ ಆಧಾರದ ಮೇಲೆ ವಿಭಜಿಸಿ, ಬ್ರಾಹ್ಮಣ್ಯವಾದಿ ಆಡಳಿತ ಮುಂದುವರಿಸಲು ಆರ್‌ಎಸ್‌ಎಸ್ ಹಾಗು ಅದರ ಅಂಗ ಸಂಸ್ಥೆಗಳು ಪ್ರಯತ್ನಿಸುತ್ತಿರುವುದು ಖಂಡನೀಯ. ವಿವಿಧ ಪ್ರಬುದ್ಧ ಸಂಘಟನೆಗಳು ಹಾಗು ನಾಗರಿಕರು ಸರ್ಕಾರಕ್ಕೆ ಕಠಿಣ ಕ್ರಮ ಕೈಗೊಳ್ಳಬೇಕು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಕೊನೆಯ ದಿನಗಳಲ್ಲಿ ಎಚ್ಚರಿಸಿದ್ದ ಧರ್ಮದ ಹೆಸರಿನಲ್ಲಿ ಹಗೆ ಹುಟ್ಟಿಸುವ ಶಕ್ತಿಗಳು ಭಾರತದ ಆತ್ಮವನ್ನು ಕೊಲ್ಲುತ್ತವೆಂಬ ಮಾತುಗಳನ್ನು ಉಲ್ಲೇಖಿಸಿ, ಇಂದಿನ ಸನ್ನಿವೇಶದಲ್ಲಿ ಆರ್‌ಎಸ್‌ಎಸ್‌ನ ಚಟುವಟಿಕೆಗಳು ಆ ಎಚ್ಚರಿಕೆಯನ್ನು ಮತ್ತೆ ಸ್ಮರಿಸಲು ಕಾರಣವಾಗಿವೆ ಎಂದರು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರಾದ ಬಿ.ಆರ್.ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಎಂಬಾತ ಶೂ ಎಸೆದ ಘಟನೆ ರಾಷ್ಟ್ರಾದ್ಯಂತ ಆಕ್ರೋಶ ಹುಟ್ಟಿಸಿದೆ. ಆತ ಸನಾತನ ಧರ್ಮ ಉಳಿಸಲು ಶೂ ಎಸೆದಿದ್ದೇನೆಂದು ಹೇಳಿರುವುದು ಕೇವಲ ವೈಯಕ್ತಿಕ ಹಗೆ ಅಲ್ಲ, ಅದು ಸಂವಿಧಾನದ ತತ್ವಗಳ ಮೇಲಿನ ಹಲ್ಲೆಯಾಗಿದೆ ಎಂದು ಮನವಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ ಎಂದರು.

ಸಮಿತಿ ಜಿಲ್ಲಾ ಸಂಚಾಲಕ ಅರಕಲಗೂಡು ದುಮ್ಮಿ ಕೃಷ್ಣ, ರಾಜ್ಯ ಸಂಚಾಲಕ ಈರೇಶ್ ಹಿರೇಹಳ್ಳಿ, ಜಿಲ್ಲಾ ಸಂಘಟನಾ ಸಂಚಾಲಕ ಮೇಲ್ ರಾಜ್, ಮಹಿಳಾ ಒಕ್ಕೂಟದ ಕಮಲಮ್ಮ, ತಾಲ್ಲೂಕು ಸಂಘಟನಾ ಸಂಚಾಲಕ ಶಿವಸ್ವಾಮಿ ಬೈಲಹಳ್ಳಿ, ಮಂಜಯ್ಯ ಯಾಚನಗುಪ್ಪೆ, ಸದಸ್ಯ ರವಿ ಮಾಗೋಡು ಹಾಜರಿದ್ದರು.






## ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ
## ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

ಗ್ರಾ.ಪಂ.ಬಾ/ಬೀ.ದಿ.ನಿ.ಟೆಂಡರ್ ಪ್ರಕಟಣೆ /02/25-26 ದಿನಾಂಕ : 10-11-2025

| ಕ್ರಮ ಸಂಖ್ಯೆ | ವಿವರಗಳು | |
|---|---|---|
| 1 | ಟೆಂಡರ್ ಕರೆದಿರುವ ಪ್ರಾಧಿಕಾರ ಸ್ವೀಕರಿಸುವ ಪ್ರಾಧಿಕಾರ | ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ. |
| 2 | ಟೆಂಡರ್ ಮೇಲ್ಮನವಿ ಪ್ರಾಧಿಕಾರ | ಕಾರ್ಯನಿರ್ವಾಹಕ ಅಧಿಕಾರಿಗಳು, ಸಕಲೇಶಪುರ ತಾಲ್ಲೂಕು ಪಂಚಾಯಿತಿ, ಹಾಸನ ಜಿಲ್ಲೆ. |
| 3 | ಟೆಂಡರ್ ವಿವರ | ಬಾಳ್ಳು ಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ದೀಪ ಸಾಮಾಗ್ರಿ ಅಳವಡಿಸಲು ಟೆಂಡರ್ ಪ್ರಕಟಣೆ |
| 4 | ಕಾಮಗಾರಿಯ ಅಂದಾಜು ಮೊತ್ತ | 1.99700 ಲಕ್ಷ |
| 5 | ಟೆಂಡರ್ ಹೊರಡಿಸಿರುವ ದಿನಾಂಕ: | 11/11/2025 |
| 6 | ಟೆಂಡರ್ ಅರ್ಜಿ ಪಡೆಯುವ ದಿನಾಂಕ: | 11/11/2025 ರಿಂದ 18/11/2025 ಸಂಜೆ 4.00 ಗಂಟೆ |
| 7 | ಟೆಂಡರ್ ಸಲ್ಲಿಸುವ ದಿನಾಂಕ: | 11/11/2025 ರಿಂದ 18/11/2025 ಸಂಜೆ 4.00 ಗಂಟೆ |
| 8 | ಟೆಂಡರ್ ತೆರೆಯುವ ದಿನಾಂಕ: | 19/11/2025 ಬೆಳಿಗ್ಗೆ 11.00 ಗಂಟೆಗೆ |
| 9 | ಟೆಂಡರ್ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ | ಅರ್ಜಿ ಶುಲ್ಕ : 200.00<br>ಇ.ಎಂ.ಡಿ. ಮೊತ್ತ: 5000/- |
| 10 | ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಸಕಲೇಪುರ ತಾಲ್ಲೂಕು | ಕಚೇರಿ ಸಮಯದಲ್ಲಿ ಟೆಂಡರ್ ಅರ್ಜಿ ಮತ್ತು ಟೆಂಡರ್ ದಾಸ್ತಾವೇಜು ಪಡೆಯುವುದು |

**ಅಧ್ಯಕ್ಷರು**
**ಬಾಳ್ಳುಪೇಟೆ ಗ್ರಾಮ ಪಂಚಾಯಿತಿ**
**ಸಕಲೇಶಪುರ ತಾಲ್ಲೂಕು**

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**
**ಬಾಳ್ಳುಪೇಟೆ ಗ್ರಾಮ ಪಂಚಾಯಿತಿ**
**ಸಕಲೇಶಪುರ ತಾಲ್ಲೂಕು**

## ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ
## ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

ಗ್ರಾ.ಪಂ.ಬಾ/ಬೀ.ದಿ.ನಿ.ಟೆಂಡರ್ ಪ್ರಕಟಣೆ //25-26 ದಿನಾಂಕ : 10-11-2025

| ಕ್ರಮ ಸಂಖ್ಯೆ | ವಿವರಗಳು | |
|---|---|---|
| 1 | ಟೆಂಡರ್ ಕರೆದಿರುವ ಪ್ರಾಧಿಕಾರ ಸ್ವೀಕರಿಸುವ ಪ್ರಾಧಿಕಾರ | ಅಧ್ಯಕ್ಷರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಕಾರ್ಯಾಲಯ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ. |
| 2 | ಟೆಂಡರ್ ಮೇಲ್ಮನವಿ ಪ್ರಾಧಿಕಾರ | ಕಾರ್ಯನಿರ್ವಾಹಕ ಅಧಿಕಾರಿಗಳು, ಸಕಲೇಶಪುರ ತಾಲ್ಲೂಕು ಪಂಚಾಯಿತಿ, ಹಾಸನ ಜಿಲ್ಲೆ. |
| 3 | ಟೆಂಡರ್ ವಿವರ | ಬಾಳ್ಳು ಪೇಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗೆ ಸೋಲಾರ್ ದೀಪ ಅಳವಡಿಸಲು ಟೆಂಡರ್ ಪ್ರಕಟಣೆ |
| 4 | ಕಾಮಗಾರಿಯ ಅಂದಾಜು ಮೊತ್ತ | 1.73343 ಲಕ್ಷ |
| 5 | ಟೆಂಡರ್ ಹೊರಡಿಸಿರುವ ದಿನಾಂಕ: | 11/11/2025 |
| 6 | ಟೆಂಡರ್ ಅರ್ಜಿ ಪಡೆಯುವ ದಿನಾಂಕ: | 11/11/2025 ರಿಂದ 18/11/2025 ಸಂಜೆ 4.00 ಗಂಟೆ |
| 7 | ಟೆಂಡರ್ ಸಲ್ಲಿಸುವ ದಿನಾಂಕ: | 11/11/2025 ರಿಂದ 18/11/2025 ಸಂಜೆ 4.00 ಗಂಟೆ |
| 8 | ಟೆಂಡರ್ ತೆರೆಯುವ ದಿನಾಂಕ: | 19/11/2025 ಬೆಳಿಗ್ಗೆ 11.00 ಗಂಟೆಗೆ |
| 9 | ಟೆಂಡರ್ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ. ಮೊತ್ತ | ಅರ್ಜಿ ಶುಲ್ಕ : 200.00<br>ಇ.ಎಂ.ಡಿ. ಮೊತ್ತ: 5000/- |
| 10 | ಬಾಳ್ಳುಪೇಟೆ ಗ್ರಾಮ ಪಂಚಾಯಿತಿ ಸಕಲೇಪುರ ತಾಲ್ಲೂಕು | ಕಚೇರಿ ಸಮಯದಲ್ಲಿ ಟೆಂಡರ್ ಅರ್ಜಿ ಮತ್ತು ಟೆಂಡರ್ ದಾಸ್ತಾವೇಜು ಪಡೆಯುವುದು |

**ಅಧ್ಯಕ್ಷರು**
**ಬಾಳ್ಳುಪೇಟೆ ಗ್ರಾಮ ಪಂಚಾಯಿತಿ**
**ಸಕಲೇಶಪುರ ತಾಲ್ಲೂಕು**

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**
**ಬಾಳ್ಳುಪೇಟೆ ಗ್ರಾಮ ಪಂಚಾಯಿತಿ**
**ಸಕಲೇಶಪುರ ತಾಲ್ಲೂಕು**


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019